
ಕಲ್ಯಾಣ ಕಿರಣ

ಏಪ್ರಿಲ್ - 2007

ವಿಶೇಷ ಸಂಚಿಕೆ

ಬೆಲೆ-6.00





ಬೆಂಗಳೂರಿನ ಬಸವ ಮಂಟಪದಲ್ಲಿ ದಿ: 13-3-2007ರಂದು ಪೂಜ್ಯ ಮಾತಾಜಿಯವರ

62ನೆಯ ವರ್ಧಂತಿ ಆಚರಣೆ



ದ್ವಿತೀಯ ಲಿಂಗಾಯತ ಗಣ ಮೇಳದ ವೇದಿಕೆ. ವೀರಣ್ಣ ಲಿಂಗಾಯತ, ಚಂದ್ರಮ್ಮ ಪಾಟೀಲ್, ಮಾಲೂತಾಯಿ, ಅಬ್ದುಲ್ ನದಾಫ್ ಪೂಜ್ಯ ಚನ್ನಬಸವಾನಂದ ಸ್ವಾಮೀಜಿ, ಪೂಜ್ಯ ಬಸವ ಲಿಂಗ ಸ್ವಾಮೀಜಿ, ದೇವಿಕಾ ಶರಣಪ್ಪ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-37 ಬಸವ ಶಕೆ-873-874 ಆಜೀವ ಸದಸ್ಯತ್ವ 600 ರೂ.
ಸಂಚಿಕೆ-12 ಏಪ್ರಿಲ್-2007 ವಾರ್ಷಿಕ ಚಂದಾ 60/- ರೂ.

ಕಲ್ಯಾಣ ಪರ್ವಕ್ಕೆ ಆಹ್ವಾನ

ಬಾ ಬಾ ಬಾ ಎಲೆ ಶರಣ ನೀನು......
ಕಲ್ಯಾಣ ಪರ್ವಕೆ ಬಂದು ಪಾವನನಾಗು ॥ ಪ ॥
ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು ॥ ಅ ॥

ಅಂದು ಆದಿಯಲಿ ಧರ್ಮ ಗುರು ಬಸವಣ್ಣ
ಚಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಲಲಿ
ತತ್ವ ಜೋಗುಳ ಹಾಡಿ ಶರಣ ಶಿಶುಗಳ ತೂಗಿ ॥ 1 ॥

ನಾಡ ಬಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ ॥ 2 ॥

ಸಮತೆಯ ಸಾರಲಿ್ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವ ಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಚನ್ನಯ್ಯ ಮಾಚಯ್ಯ ನಾಗಲೆಯು ಕಾದಿಹರು ॥ 3 ॥

ಶರಣರ ಕರುಳಿನ ಕರೆಯು ತಾ ಕೇಳಿಸದೆ ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹತ್ಯಾಗ ಅರಿಯೆಯಾ? ॥ 4 ॥

ಬಸವ ಕಲ್ಯಾಣವು ಶರಣ ಭೂಮಿಯು ಎಂದು
ಕಲ್ಯಾಣ ಪರ್ವಕೆ ಬಂದು ಶರಣ ಸ್ಮರಣೆಯ ಮಾಡು
ಬಸವ ಗುರು ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ನೀ ಧನ್ಯನಾಗು ॥ 5 ॥

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ವವ ತಿಳಿದು ವಿಶ್ವ ಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ವವನು ಪಸರಿಸು
ಬಸವಾತ್ಮಜೆಯಾದ ಮಾತೆಯ ಕರೆಯಿದು. ॥ 6 ॥

- ಬಸವಾತ್ಮಜೆ

★ ಕಲ್ಯಾಣ ಕಿರಣ ★

ಸಂಪುಟ 36 ಬಸವ ಶಕೆ 873-874 ಆಜೀವ ಸದಸ್ಯತ್ವ 600ರೂ

ಸಂಚಿಕೆ 12 ಮಾರ್ಚ- 2007 ವಾರ್ಷಿಕ ಚಂದಾ 60/-ರೂ.



ವಿಶ್ವಗುರು ಬಸವಣ್ಣನವರ
874ನೆಯ ಬಸವ ಜಯಂತಿಯ
ಶುಭಾಶಯಗಳು

ಮೇ ತಿಂಗಳಲ್ಲಿ ಬರುವ ಹಬ್ಬ ಉತ್ಸವಗಳು

1.ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ	-	ಮೇ 1,2,3
2.ಮಡಿವಾಳ ಮಾಚಿದೇವರ ಜಯಂತಿ ಆಚರಣೆ	-	ಮೇ 2

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, at Padma Shri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥



ಧರ್ಮಗುರು ಬಸವಣ್ಣ

866666

ಕಾಯಕವೇ ಕೈಲಾಸವೆಂದು ಸಾರಿದ
ಶರಣ ಭೂಮಿ ಬಸವ ಕಲ್ಯಾಣದಲ್ಲಿ
ವಿಶ್ವ ಕಾಯಕದ ದಿನದ ಅಂಗವಾಗಿ ಆರನೆಯ

ಕಲ್ಯಾಣ ಪರ್ವ

2007ರ ಮೇ 1, 2, 3,ರಂದು



ಗಣ ಧ್ವಜ

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರಿಂದ ನಡೆಸಿಕೊಂಡು ಬರಲಾಗುತ್ತಿದೆ.

ಅದೇ ರೀತಿ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ಧಾರ್ಮಿಕ ಸಮಾವೇಶವನ್ನು ಪ್ರತಿ ವರ್ಷದ ಮೇ 1,2,3ರಂದು ನಡೆಸಲು ಸಂಕಲ್ಪಿಸಲಾಗಿದೆ. ವರ್ಣಾಂತರ ವಿವಾಹವನ್ನು ಪ್ರೋತ್ಸಾಹಿಸಿದ್ದಕ್ಕಾಗಿ ತಪ್ಪರಾದ ಸಂಪ್ರದಾಯವಾದಿಗಳಿಂದಾಗಿ ಧರ್ಮಪಿತ ಬಸವಣ್ಣನವರು ಗಡಿಪಾರು ಶಿಕ್ಷೆ ಅನುಭವಿಸಬೇಕಾಯಿತು. ಹರಳಯ್ಯ- ಮಧುವರಸ-ಶೀಲವಂತರು ಎಳೆಹೂಟೆ ಶಿಕ್ಷೆಗೆ ಒಳಗಾಗಿ ಪ್ರಾಣಬಿಡಬೇಕಾಯಿತು. ವಚನ ಸಾಹಿತ್ಯವನ್ನು ಜಾತಿವಾದಿಗಳು ನಾಶ ಮಾಡಲು ಯತ್ನಿಸಿದಾಗ ಅದನ್ನು ಸಂರಕ್ಷಿಸಲು ಚಿನ್ಮಯ ಜ್ಞಾನಿ ಚನ್ನಬಸವಣ್ಣ, ವೀರ ಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರು ವಚನ ವಾಙ್ಮಯವನ್ನು ಹೊತ್ತು ಕಲ್ಯಾಣದಿಂದ ಹೊರ ನಡೆದರು. ಶರಣರ ಈ ಬಲಿದಾನದ ಸಂಸ್ಮರಣೆಗಾಗಿ ಕಾಯಕವೇ ಕೈಲಾಸ ಎಂಬ ದುಡಿಮೆಯ ಸಪ್ತಾಕ್ಷರಿ ಮಂತ್ರವನ್ನು ಸಾರಿದ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ವಾರ್ಷಿಕ ಸಮಾವೇಶ ನಡೆಸಲಾಗುತ್ತಿದೆ. ಉದ್ಘಾಟನಾ ಗೋಷ್ಠಿ, ಸಾಮೂಹಿಕ ಇಷ್ಟಲಿಂಗಾರ್ಚನೆ, ಸಮುದಾಯ ಪ್ರಾರ್ಥನೆ,ಶರಣ ಸ್ಮರಣೆ, ಶೂನ್ಯ ಪೀಠಾರೋಹಣ ಕಲ್ಯಾಣ ಪರ್ವದ ಮುಖ್ಯ ಧಾರ್ಮಿಕ ವಿಧಿಗಳು. ಮೇ 1ರಂದು ಬೆಳಗ್ಗೆ 10ರಿಂದ ಬಸವ ಧ್ವಜಾರೋಹಣ, ಸಮುದಾಯ ಪ್ರಾರ್ಥನೆ ಮತ್ತು ಶರಣಾರ್ಥಿ (ಶರಣ ವಂದನೆ) ಕಾರ್ಯಕ್ರಮ ನೆರವೇರಲಿದೆ. ಚಿಂತನ ಗೋಷ್ಠಿ, ಉಪನ್ಯಾಸ,ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಕಲ್ಯಾಣ ಪರ್ವವು ಉತ್ತಮ ಜ್ಞಾನ ದಾಸೋಹದೊಡನೆ ಅನ್ನ ದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ.

ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳ/ಕಲ್ಯಾಣ ಪರ್ವದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಇಂಥ ಪವಿತ್ರ ಸಮಾಗಮ ಕಲ್ಯಾಣ ಪರ್ವಕ್ಕೆ ಜಾತಿ,ಮತ,ಪಂಥಗಳ ಭೇದವಿಲ್ಲದೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಬೆಂಗಳೂರು ವಿಳಾಸ :
ಬಸವ ಮಂಟಪ
2035, 2ನೇ ಬ್ಲಾಕ್, ಕಾರ್ಡ್ ರಸ್ತೆ
ರಾಜಾಜಿ ನಗರ, ಬೆಂಗಳೂರು-560010
ದೂ: 080-23131476/23325335

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಕಲ್ಯಾಣ ಪರ್ವ ಉತ್ಸವ ಸಮಿತಿ,
ಬಸವ ಕಲ್ಯಾಣ-585327
ತಾ-ಬಸವ ಕಲ್ಯಾಣ, ಜಿ-ಬೀದರ್
ದೂ-08481-251921/252856

ಬಾಳೊಂದು ವರ, ಬದುಕೊಂದು ಕಲೆ- 2

-ಮಾತಾಜಿ

1.ಶೃಂಗಾರ ಯಾವುದು?

ಕಣ್ಗೆ ಶೃಂಗಾರ ಗುರು ಹಿರಿಯರ ನೋಡುವುದು
ಕರ್ಣಕ್ಕೆ ಶೃಂಗಾರ ಪುರಾತರ ಸುಗೀತಂಗಳ ಕೇಳ್ವುವುದು
ವಚನಕ್ಕೆ ಶೃಂಗಾರ ಸತ್ಯವ ನುಡಿವುದು
ಸಂಭಾಷಣೆಗೆ ಶೃಂಗಾರ ಸದ್ವಕ್ತರ ನುಡಿಗಡಣ
ಕರಕ್ಕೆ ಶೃಂಗಾರ ಸತಾತ್ರಕ್ಕೆ ಈವುದು
ಜೀವಿಸುವ ಜೀವನಕ್ಕೆ ಶೃಂಗಾರ ಗಣ ಮೇಳಾಪ
ಇವಿಲ್ಲದ ಜೀವಿಯ ಬಾಳುವೆ ಏತಕ್ಕೆ ಬಾತೆಯಯ್ಯಾ, ಚನ್ನಮಲ್ಲಿಕಾರ್ಜುನ

ಜಗನ್ಮಾತಾ ಅಕ್ಕಮಹಾದೇವಿಯ ವಚನಗಳು ಜೀವನದ ಸಾರ್ಥಕತೆ ಯಾವುದರಲ್ಲಿದೆ ಎಂಬುದನ್ನು ಬಹಳ ಮಾರ್ಮಿಕವಾಗಿ ಬಣ್ಣಿಸುವ ಸೂತ್ರಗಳಾಗಿವೆ. ಸಾಮಾನ್ಯ ಲೌಕಿಕ ಜೀವಿಗಳು ಭೌತಿಕ ಶರೀರದ ಅಲಂಕಾರವೇ ಅತ್ಯಂತ ಮಹತ್ವಪೂರ್ಣ ಎಂದು ಭಾವಿಸಿ ಕಣ್ಣು ಮೂಗು ಹುಬ್ಬುಗಳನ್ನು ತಿದ್ದಿ ತೀಡಿ ಕೊಳ್ಳುವುದರಲ್ಲಿಯೇ ಬಹಳಷ್ಟು ಸಮಯವನ್ನು ಕಳೆಯುತ್ತಾರೆ.ಆದರೆ ನಿಜವಾಗಿಯೂ ಕಣ್ಣಿಗೆ ಸಂತಸವನ್ನು ತಂದು ಕೊಡುವುದು ಯಾವುದೆಂದರೆ ಗುರು, ಹಿರಿಯರನ್ನು ಕಾಣುವುದು. ಸಾಕಿ ಸಲಹಿದ ತಂದೆ-ತಾಯಿ, ಹಿರಿಯರನ್ನು ಕಂಡು ಅವರ ಸೇವೆ ಮಾಡುವುದರಲ್ಲೇ ಕೆಲವರು ಅಪಾರ ಸಂತೋಷ ಪಡುತ್ತಾರೆ. ಜೀವನದಲ್ಲಿ ಕೆಲವು ಮೌಲ್ಯಗಳನ್ನು ಅಳವಡಿಸಿಕೊಂಡ ಗೃಹಸ್ಥರು ತಂದೆ-ತಾಯಿ, ಹಿರಿಯರನ್ನು ಹೂವಿನಂತೆ ಜೋಪಾನ ಮಾಡುತ್ತಾರೆ. ಯಾವುದೇ ಆದರ್ಶ ಇಲ್ಲದ ಸ್ವಸುಖಾಸಕ್ತರು ಹಿರಿಯರನು ಕಾಲ ಕಸಕ್ಕಿಂತಲೂ ಕಡೆಯಾಗಿ ಕಾಣುತ್ತಾರೆ. ಕಾರಣಾಂತರದಿಂದ ಕೆಲವು ಕಾಲ ಅಗಲಿ ನಂತರ ಭೇಟಿಯಾದಾಗ ಆಗುವ ಸಂತೋಷ ವರ್ಣಿಸಲು ಅಸದಳ.

ಅಕ್ಕಮಹಾದೇವಿ ಕೇವಲ ಹಿರಿಯರ ನೋಡುವುದು ಎಂದು ಹೇಳಿ ಸುಮ್ಮನಿದ್ದರೆ ಈ ಕಾಣುವಿಕೆಗೆ ಆಧ್ಯಾತ್ಮಿಕ ಸ್ಪರ್ಶ ಬರುತ್ತಿರಲಿಲ್ಲ. ಗುರು ದರ್ಶನಕ್ಕೆ ಮೊದಲಿನ ಸ್ಥಾನವನ್ನು ಕೊಟ್ಟಿದ್ದಾರೆ. ಅಧ್ಯಾತ್ಮ ಜೀವಿಗಳಿಗೆ ರಕ್ತ ಸಂಬಂಧಿಗಳಿಗಿಂತ ಭಕ್ತಿ ಸಂಬಂಧಿಗಳು ಬಹಳ ಮುಖ್ಯ. ಅಧ್ಯಾತ್ಮಿಕ ಪುನರ್ಜನ್ಮ ನೀಡಿದ ಗುರುವಿನ ಮತ್ತು ಜ್ಞಾನವನ್ನು ಕೊಡುವ ಶರಣ, ಸಂತರ ದರ್ಶನ ಅತ್ಯಂತ ಆನಂದದಾಯಕ "ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ, ಬರಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು" ಎಂದು ಅಕ್ಕಮಹಾದೇವಿ ಗುರುಗಳ ದರ್ಶನವಾದಾಗ ಸಂಭ್ರಮಿಸುತ್ತಾರೆ.

ಕಿವಿಗೆ ಯಾವುದು ಶೋಭಾಯಮಾನ, ಕರ್ಣಾಭರಣಗಳೇ ಅಲ್ಲಲ್ಲ ; ಪುರಾತರು ಅರ್ಥಾತ್ ಶರಣರು ಹಾಡಿದ ಸುಗೀತಂಗಳಾದ ವಚನಗಳನ್ನು ಕೇಳುವುದು.ಆ ಮಾತುಗಳು ಕಿವಿಯ ಮೂಲಕ ಒಳಗೆ ಪ್ರವೇಶಿಸಿ, ಮನಸ್ಸನ್ನು ತುಂಬಿ ವಿವೇಕಕ್ಕೆ ಮಾರ್ಗದರ್ಶನ ನೀಡುತ್ತವೆ. Poets are unacknowledged legislators of the world ಎಂಬ ಒಬ್ಬ ತತ್ವಜ್ಞಾನಿ ಹೇಳಿದರೆ, Their sayings are foot prints on the sands of time ಎಂದು ಮತ್ತೊಬ್ಬ ತತ್ವವೇತ್ತ ನುಡಿಯುತ್ತಾನೆ. ಮಹಾತ್ಮರ ನುಡಿಗಳು ದಾರಿ ದೀಪಗಳು, ಕಗ್ಗತ್ತಲೆಯಲ್ಲಿ ದಾರಿ ತೋರುವ ಬೆಳಕಿನಂತೆ ಜೀವನದ ಸಂಕಷ್ಟದ ಸಮಯದಲ್ಲಿ ದಾರಿ ತೋರುತ್ತವೆ.

ವ್ಯಕ್ತಿಯ ಮಾತಿಗೆ ಘನತೆ ಬರುವುದು ಸತ್ಯವನ್ನು ನುಡಿದಾಗ. ನಮ್ಮ ದೇಶದಲ್ಲಿ ಸತ್ಯವಾದಿಗಳಿಗೆ, ನೀತಿವಂತರಿಗೆ, ಆದರ್ಶ ಜೀವಿಗಳಿಗೆ ಕಿರುಕುಳ ಜಾಸ್ತಿ; ರಂಜನೀಯವಾಗಿ ಮಾತನಾಡುವವರಿಗೆ ಯಾವ ತತ್ವಕ್ಕೂ ಗಟ್ಟಿಯಾಗಿ ನಿಲ್ಲದೆ ಸಮಯ ಸಾಧಕರು ಸ್ವಾರ್ಥಿಗಳು ಆಗಿ ಬಾಳುವವರಿಗೆ ಬಹಳ ಗೌರವ. ಆದರೆ ಆಶ್ಚರ್ಯದ ಸಂಗತಿ ಎಂದರೆ ಅಂಥವರು ಬದುಕಿ ಸತ್ತು ಹೋಗುವಂಥವರು; ಸತ್ಯವಾದಿಗಳೇ ಸತ್ತೂ ಬದುಕುವ ಅಮರಾತ್ಮರು. ಮುಖ್ಯ ಕಾರಣ ಅವರು ಜೀವಿತ ಕಾಲದಲ್ಲಿ ಸತ್ಯವಾದಿಗಳಾಗಿ ಇರುವುದು.

ಸಂಭಾಷಣೆಗೆ, ಚರ್ಚೆಗೆ, ಸಂವಾದಕ್ಕೆ ಶೋಭೆಯನ್ನು ತಂದು ಕೊಡುವುದು ಸುಜ್ಞಾನಿಗಳ, ಸದ್ವಕ್ತರ ನುಡಿಗಳು, ಉಕ್ತಿಗಳು. ಸಾಮಾನ್ಯ ಲೌಕಿಕರು ಒಂದೆಡೆ ಸೇರಿದಾಗ ಊಟ, ವಸ್ತ್ರ, ಆಭರಣ, ಆಸ್ತಿ ಸ್ಥಾನಮಾನ ಕುರಿತು ಮಾತನಾಡಿದರೆ ಜ್ಞಾನಿಗಳು ಉತ್ತಮವಾದ ಅನುಭವದ ಮಾತುಗಳನ್ನಾಡುವರು.

ಅರಿಯದವರೊಡನೆ ಸಂಗವ ಮಾಡಿದೊಡೆ
ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ
ಬಲ್ಲವರೊಡನೆ ಸಂಗವ ಮಾಡಿದೊಡೆ
ಮೊಸರ ಒಸೆದು ಬೆಣ್ಣೆಯ ತೆಗೆದುಕೊಂಬಂತೆ

ಮೊಸರು ಕಡೆದಾಗ ಬೆಣ್ಣೆ ಉಂಡೆ ಉಂಡೆಯಾಗಿ ಬರುವಂತೆ ಜ್ಞಾನಿಗಳ ಮಾತಿನಲ್ಲಿ ಸುಜ್ಞಾನದ ಬೆಣ್ಣೆ ಸಿಗುವುದು. ಇವುಗಳನ್ನು ಉಕ್ತಿಗಳನ್ನಾಗಿ ಬಳಸುತ್ತ ಸಂಭಾಷಣೆ ಮಾಡಿದಾಗ ಅದು ಬಹಳ ಪ್ರೌಢವಾಗಿ, ಅರ್ಥಗರ್ಭಿತವಾಗಿ ಕಾಣುತ್ತ, ಮಾತನಾಡುವವರ ಬಗ್ಗೆ ಕೇಳುಗರಲ್ಲಿ ಗೌರವ ಭಾವ, ಹುಟ್ಟಿ, ಅವರ ಮಾತು ಮನಸಿನ ಮೇಲೆ ಪರಿಣಾಮ ಬೀರುತ್ತವೆ.

ಕೈಗೆ ಯಾವುದು ಸುಂದರ? ಬಳೆ, ಕೈಚೈನು ಮುಂತಾದವೆ ? ಅವುಗಳು ಶ್ರೀಮಂತಿಕೆಗೆ ಸಾಕ್ಷಿ ನುಡಿಯ ಬಹುದು. ಆದರೆ ಆ ಶ್ರೀಮಂತಿಕೆ ಸಾರ್ಥಕವಾಗುವುದು ಸಂಪತ್ತನ್ನು ಕೈ ಎತ್ತಿ ಸತ್ಪಾತ್ರಕ್ಕೆ ಕೊಟ್ಟಾಗ ಮಾತ್ರ. ಹಣವನ್ನು ತನಗಾಗಿ ಬಳಸಿಕೊಳ್ಳುವುದಕ್ಕಿಂತಲೂ ಇತರರಿಗೆ ಪರಹಿತಾರ್ಥ ದೃಷ್ಟಿಯಿಂದ ಕೊಟ್ಟಾಗ ಹೆಚ್ಚಿನ ಆನಂದವಾಗುತ್ತದೆ.

ಮಾನವನ ಜೀವನಕ್ಕೆ ಹೆಚ್ಚಿನ ಶೋಭೆಯನ್ನು ತಂದು ಕೊಡುವುದು ಶರಣರೊಡನೆ ಮಾಡುವ ಗಣ ಮೇಳಾಪ. ಆರೋಗ್ಯವನ್ನು ಕಾಯ್ದುಕೊಳ್ಳುವುದು, ಬಂದಿರುವ ಕಾಯಿಲೆಯನ್ನು ಗುಣ ಪಡಿಸಿ ಕೊಳ್ಳುವುದು ಈ ಎರಡು ಮುಖ್ಯ. ಅದೇ ರೀತಿ ಮಾನವನು ಮಾನಸಿಕ ಸ್ವಾಸ್ಥ್ಯ ಮತ್ತು ಆನಂದ ಪಡೆದುಕೊಳ್ಳಲು ಒತ್ತಡ, ಸಂಕಷ್ಟ, ಹೊಯ್ದಾಟ, ಚಂಚಲತೆ ಇವೆಲ್ಲಕ್ಕೂ ಪರಿಹಾರ ಶರಣರ ಸಂಗ.

ಇಂತಿವೆಲ್ಲ ಇಲ್ಲದೆ ಇರುವ ಜೀವನ ಅರ್ಥರಹಿತ ಮತ್ತು ನಿಷ್ಪ್ರಯೋಜಕ ಎಂಬುದು ಅಕ್ಕಮಹಾದೇವಿ ತಾಯಿಯವರ ನಿಲುವು.

ಜ್ಯೋತಿಷ್ಯ ಹುಲು ಮಾನವನ ದುಃಸಾಹಸ -2

ಮಾನವನು ವಿಕಾಸದ ದೃಷ್ಟಿಯಿಂದ ಸೃಷ್ಟಿಯ ಕಿರೀಟದಂತಿರಬಹುದು. ವಿಕಾಸದ ಶೃಂಗ (peak) ಆಗಿರಬಹುದು. ಆದರೆ ಬ್ರಹ್ಮಾಂಡದ ಗಾತ್ರದ ದೃಷ್ಟಿಯಿಂದ ಅತ್ಯಂತ ಕ್ಷುದ್ರ ಜಂತು. ಬೃಹತ್ ಬ್ರಹ್ಮಾಂಡ, ತಾರಾ ಪಥ, ಸೌರವ್ಯೂಹ, ಭೂಮಿ ಎಲ್ಲವುಗಳ ಹಿನ್ನೆಲೆಯಲ್ಲಿ ಒಂದು ಚೂಪಾದ ಸೀಸ ಕಡ್ಡಿ(pensil) ಯ ತುದಿಯಷ್ಟೂ ಅಲ್ಲ. ಆದರೂ ಒಂದು ಸಣ್ಣ ಕೀಡೆ ತನ್ನ ಪುಟ್ಟ ಬಾಹುಗಳಿಂದ ತೆವಳುತ್ತ ಬೃಹತ್ತಾದ ವಸ್ತುಗಳನ್ನು ಹತ್ತುವಂತೆ ತನ್ನ ಊಹಾ ಬಲದಿಂದ, ಕಲ್ಪನಾ ಸಾಮರ್ಥ್ಯದಿಂದ ಏನೇನನ್ನೋ ನಿರ್ಣಯಿಸುತ್ತಾನೆ. ಭೌತ, ರಸಾಯನ, ಭೂಗರ್ಭ, ಭೂಗೋಲ ಇತ್ಯಾದಿಗಳ ಕ್ಷೇತ್ರದಲ್ಲಿ ತನ್ನ ಊಹೆಯನ್ನು(assumption) ಪರೀಕ್ಷೆಗೆ ಒಡ್ಡಿ, ಪ್ರಯೋಗಕ್ಕೆ ಒಳಪಡಿಸಿ ಅಂತೂ ಏನೇನೋ ಸೂತ್ರಗಳನ್ನು ಕಂಡು ಹಿಡಿಯುತ್ತಾನೆ. ಈ ದಿಶೆಯಲ್ಲಿ ಜ್ಯೋತಿರ್ವಿಜ್ಞಾನವೂ ಸಹ ದೂರದರ್ಶಕಗಳ ನೆರವಿನಿಂದ ಯಶಸ್ವಿಯಾಗಿದೆ. ಆದರೆ ಬಹುಪಾಲು ಜನರನ್ನು ಮೂಢನಂಬಿಕೆಯ ಪ್ರಪಾತಕ್ಕೆ ತಳ್ಳಿರುವ ಜ್ಯೋತಿಷ್ಯ ಮಾತ್ರ ಹುಲು ಮಾನವನ ಅಜ್ಞಾನ ಯುಕ್ತವಾದ ದುಃಸಾಹಸದ ಫಲ ಎಂದೆನಿಸುತ್ತದೆ. ಒಂದು ಭಯಂಕರ ಪ್ರವಾಹ ಬಂದಾಗ ಮಾನವನು ಒತ್ತಟ್ಟಿಗಿರಲಿ ಆನೆ ಸಹಿತ ಆ ಪ್ರವಾಹದಲ್ಲಿ ಸಿಕ್ಕಿ ನಿಸ್ಸಹಾಯಕವಾಗಿ ಕೊಚ್ಚಿ ಹೋಗುವುದು ಹಾಗೆ ಜ್ಯೋತಿಷ್ಯವನ್ನು ನಂಬಿ ತಿಥಿ, ವಾರ, ಮುಹೂರ್ತ, ನಕ್ಷತ್ರ ಎಂದು ಎಷ್ಟೊಂದು ಭ್ರಮೆಯನ್ನು ಜನರು ತುಂಬಿಕೊಳ್ಳುತ್ತಾರೆ. ಯಾವುದೋ

ಲಕ್ಷಾಂತರ ಮೈಲು ದೂರದಲ್ಲಿ ಸಂಚರಿಸುವ ಜಡ ಗ್ರಹಗಳನ್ನು ನಂಬಿ ಜಾತಕ ಬರೆಯುವುದು ಎಷ್ಟು ಹಾಸ್ಯಾಸ್ಪದ. ತನ್ನ ಹುಟ್ಟು ಸಾವಿನ ಬಗ್ಗೆ ತಿಳಿಯದ ಜೋತಿಷಿ ಅನ್ಯರ ಭವಿಷ್ಯ ತಿಳಿಯುವ ಸಾಮರ್ಥ್ಯವಿರುವುದಾಗಿ ಹೇಳುತ್ತಾನೆ. ಜನರಿಗೆ ಗ್ರಹಗಳ ಕಾಟವಿದೆ ಎಂದು ಅವರನ್ನು ಭಯ ಭ್ರಾಂತಿಯಲ್ಲಿ ಕೆಡಹುತ್ತಾನೆ. ಸರ್ವಶಕ್ತನಾದ ದೇವರಲ್ಲಿ ನಂಬಿಕೆ ಇಟ್ಟವರು ಕ್ಷುದ್ರ ಗ್ರಹಗಳ ಬಗ್ಗೆ ಏಕೆ ಭಯ ಪಡುತ್ತಾರೆ ? ಮುಂದೆ ಹೀಗಾಗುತ್ತೆ ಹಾಗಾಗತ್ತೆ ಎಂದೆಲ್ಲ ಜೋತಿಷಿ ಭ್ರಾಂತಿ ಹುಟ್ಟಿಸುತ್ತಾನೆ. ಪುನಃ ಆ ಕೆಡಕಿಗೆ ಪರಿಹಾರ ನೀಡುವುದಾಗಿ ಏನೇನೋ ಶಾಂತಿ ಮಾಡಿಸ ಹೋಗುತ್ತಾನೆ. ಲಕ್ಷಾಂತರ ಮೈಲು ದೂರದಲ್ಲಿರುವ ಆ ಗ್ರಹಗಳನ್ನು ಒಂದು ಎಳ್ಳಿನ ದೀಪ ಹಚ್ಚಿ, 100 ಗ್ರಾಂ ಗೋಧಿ ಇತ್ಯಾದಿ ಕೊಟ್ಟು, ಅದೃಷ್ಟವನ್ನು ಬದಲಿಸಲು ಸಾಧ್ಯವೆ ? ವಿಚಾರ ಶಕ್ತಿಯನ್ನು ಕಳೆದುಕೊಂಡ ಮೂಢರು ಜೋತಿಷಿಯ ಅಜ್ಞಾನುಸಾರಿಗಳಾಗಿ ವರ್ತಿಸುತ್ತಾರೆ. ಮುಖ್ಯ ಮಂತ್ರಿಗಳಾದಿಯಾಗಿ ಜ್ಯೋತಿಷಿಗಳ ಬೆನ್ನು ಹತ್ತುವುದನ್ನು ಕಂಡಾಗ, ಗುಡಿ ಗುಡಿ ಸುತ್ತುವುದನ್ನು ಕಂಡಾಗ ಮನಸ್ಸಿಗೆ ಬಹಳ ವಿಷಾದವೆನ್ನಿಸದಿರದು. ಈ ಭ್ರಾಂತಿಯಿಂದ ಹೊರಬರಲು ವಚನ ಸಾಹಿತ್ಯ ಅಧ್ಯಯನ ಒಂದೇ ಪರಿಹಾರ.

ಕಲ್ಯಾಣ ಪರ್ವ ಕಾರ್ಯಕ್ರಮದ ಸಂಕ್ಷಿಪ್ತ ವಿವರ

ಬಸವ ಕಲ್ಯಾಣದ ಬಸವ ಮಹಾಮನೆಯ ಆವರಣದಲ್ಲಿ 2007ನೆಯ ಇಸವಿಯ ಮೇ 1, 2, ಮತ್ತು 3ರಂದು ಕೆಳಗಿನಂತೆ ಕಾರ್ಯಕ್ರಮಗಳು ಜರುಗಲಿವೆ.

1-05-2007, ಬಸವ (ಮಂಗಳ)ವಾರ,

ಬೆಳಿಗ್ಗೆ : 10-30 ಕ್ಕೆ ಉದ್ಘಾಟನಾ ಸಮಾರಂಭ, ಸಾಮೂಹಿಕ ಪ್ರಾರ್ಥನೆ
ಮಧ್ಯಾಹ್ನ : 3-30ರಿಂದ 5-30 ಧಾರ್ಮಿಕ ರಸ ಪ್ರಶ್ನೆ (ಲಿಖಿತ ಪರೀಕ್ಷೆ) ಕಾರ್ಯಕ್ರಮ
ಸಂಜೆ : 6-30ರಿಂದ 9-00 ಧರ್ಮ ಚಿಂತನ ಗೋಷ್ಠಿ
ರಾತ್ರಿ : 9ರ ನಂತರ ಸಾಂಸ್ಕೃತಿಕ ಕಾರ್ಯಕ್ರಮ

2-05-2007, ಚನ್ನ (ಬುಧ)ವಾರ,

ಬೆಳಿಗ್ಗೆ : 7-30ಕ್ಕೆ ಸಾಮೂಹಿಕ ಇಷ್ಟಲಿಂಗಾರ್ಚನೆ
ಬೆಳಿಗ್ಗೆ : 10-30 ಕ್ಕೆ ಸಾಮೂಹಿಕ ಪ್ರಾರ್ಥನೆ, ಶರಣ ಸ್ಮರಣೆ
ಮಧ್ಯಾಹ್ನ : 3-30ರಿಂದ 5-30 ಧಾರ್ಮಿಕ ರಸ ಪ್ರಶ್ನೆ (ಮೌಖಿಕ ಸ್ಪರ್ಧಾ) ಕಾರ್ಯಕ್ರಮ
ಸಂಜೆ : 6-30ರಿಂದ 9-00 ರಾಷ್ಟ್ರೀಯ ಬಸವ ದಳದ ಅಧಿವೇಶನ
ರಾತ್ರಿ : 9ರ ನಂತರ ಸಾಂಸ್ಕೃತಿಕ ಕಾರ್ಯಕ್ರಮ

3-05-2007, ಪ್ರಭು (ಗುರು)ವಾರ,

ಬೆಳಿಗ್ಗೆ : 7-30 ಕ್ಕೆ ಸಾಮೂಹಿಕ ಬಸವಾರ್ಚನೆ
ಬೆಳಿಗ್ಗೆ : 10-30ರಿಂದ ಶೂನ್ಯ ಪೀಠಾರೋಹಣ ಕಾರ್ಯಕ್ರಮ ಮತ್ತು ಸಮಾರೋಪ ಸಮಾರಂಭ

ಪ್ರಾಣಾಯಮ ತರಬೇತಿ

ಮಹಾರಾಷ್ಟ್ರದ ಶರಣ. ರಾಮಚಂದ್ರ ಮಾಳಿ ಅವರು ಹರದ್ವಾರದ ಪೂಜ್ಯ ಶ್ರೀ ರಾಮದೇವ ಬಾಬಾ ಅವರ ಪತಂಜಲ ಯೋಗ ಕೇಂದ್ರದಲ್ಲಿ ತರಬೇತಿ ಹೊಂದಿದವರಿದ್ದು ಅತುಂತ ಸರಳ ಯೋಗಾಸನ ಮತ್ತು ಸಹಜ ಮತ್ತು ಸರಳ ಪ್ರಾಣಾಯಮ ಅಭ್ಯಾಸ ಹೇಳಿಕೊಟ್ಟು ಅನೇಕ ರೋಗಗಳನ್ನು ಪರಿಹರಿಸಿಕೊಳ್ಳುವ ತರಬೇತಿ ನೀಡುತ್ತಾರೆ. ಆದ್ದರಿಂದ ಪ್ರತಿ ನಿತ್ಯ ಕಲ್ಯಾಣ ಪರ್ವದ 3 ದಿವಸಗಳ ಬೆಳಗಿನ ಸಮಯದಲ್ಲಿ ಈ ತರಬೇತಿಯ ಉಪಯೋಗವನ್ನು ಪಡೆಯಬೇಕೆಂದು ಸೂಚಿಸುತ್ತೇವೆ.

1. ಮಾನ ಮತ್ತು ಧನ

ಜೀವನದ ಅನೇಕ ಸಂದರ್ಭಗಳಲ್ಲಿ ಮಾನ (ಕೀರ್ತಿ, ಗೌರವ) ಮತ್ತು ಧನ ಎರಡರಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಸಂದಿಗ್ದತೆ ಎದುರಾಗುವುದು. ಎರಡೂ ಒಟ್ಟಿಗೆ ಸರಳವಾಗಿ ಸಹಜವಾಗಿ ಸಿಗುತ್ತಿದ್ದರೆ ಸಮಸ್ಯೆ ಇಲ್ಲ. ಎರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿ ಬಂದಾಗ ಆದರ್ಶವಾದಿಗಳು ಧನವನ್ನು ಕಡೆಗಣಿಸಿ ಮಾನವನ್ನು (ಅಥವಾ ಯಾವುದಾದರೊಂದು ತತ್ವ ಸಿದ್ಧಾಂತವನ್ನು)ಆರಿಸಿಕೊಳ್ಳುವರು. ಸ್ವಾರ್ಥಿಗಳು ನಿರಭಿಮಾನಿಗಳು ಧನ ದಾಹಿಗಳು ಮಾನವನ್ನು ಕಳೆದುಕೊಂಡು ಧನವನ್ನು ಸಂಪಾದಿಸಲು ಯತ್ನಿಸುವರು.

ವಿಶ್ವಕಪ್ ಅನ್ನು ಗೆಲ್ಲುವಲ್ಲಿ ಭಾರತ ತಂಡವು ನಿರಾಶೆ ತಂದು ಲೀಗ್ ಹಂತದಲ್ಲಿಯೇ ನಿರ್ಗಮಿಸಿತು. ಭಾರತ ತಂಡದ ಆಟಗಾರರ ಕಳಪೆ ನಿರ್ವಹಣೆಯು ದೇಶದ ಮರ್ಯಾದೆಯನ್ನು ಬೀದಿಗಿಟ್ಟಿತು. ಇನ್ನೂ ಹೆಚ್ಚಿನ ವಿಷಾದದ್ದ ಸಂಗತಿ ಎಂದರೆ ಅದು ಸೋತಿದ್ದು ತೀರಾ ಚಿಕ್ಕ ದೇಶ ಬಾಂಗ್ಲಾ ಎದುರಿಗೆ ಮತ್ತು ಉದಯೋನ್ಮುಖ ಆಟಗಾರರ ತಂಡದ ಎದುರಿಗೆ.

ಈ ಸೋಲು ಉದ್ದೇಶ ಪೂರ್ವಕವಾಗಿ ಆಟಗಾರರು ತಂದುಕೊಂಡ ಸೋಲು, ಪೂರ್ವ ನಿರ್ಧಾರಿತ ಎಂಬ ಭಾವ ಎಲ್ಲರಲ್ಲಿ ಮೂಡಿದಾಗ ಆದ ಆಘಾತ ಅಳತೆಗೆ ಮೀರಿದ್ದು. ಹಣದ ಆಸೆಗೆ ಬಲಿಯಾಗಿ ಸರಿಯಾದ ಸ್ಪರ್ಧೆಯನ್ನು ನೀಡದೆ ಮೊದಲೇ ಹಣಕ್ಕೆ ಮರುಳಾಗಿ ಸೋಲು ಬರುವಂತೆ ಆಡಿದ್ದು ನಿಜಕ್ಕೂ ಹೇಯವಾದುದು. ಪಾಕಿಸ್ತಾನವು ಇದೇ ಜಾಡಿನಲ್ಲಿ ಸಾಗಿದ್ದಲ್ಲದೆ ಇಂಥ ಹೇಯ ಉದ್ದೇಶವನ್ನು ಅರಿತು ಎಚ್ಚರಿಕೆ ನೀಡಿದ್ದ ಕ್ರಿಕೆಟ್ ಕೋಚ್ ವೂಲ್ಮರ್ ಸಾವಿಗೂ ಕಾರಣವಾದ ಕೀಳು ಕೃತ್ಯ ಜಗತ್ತನ್ನೇ ಕಂಗೆಡಿಸಿದೆ. ಭಾರತೀಯ ಆಟಗಾರರಿಗೆ ಜಾಹಿರಾತುಗಳಲ್ಲಿ ಕಾಣಿಸಿಕೊಂಡು, ಸೋಲಲು ಪೂರ್ವನಿರ್ಧಾರಿತ ಒಪ್ಪಂದ ಮಾಡಿಕೊಂಡು ಹಣವನ್ನು ಸಂಪಾದಿಸುವುದರಲ್ಲಿ ಆಸಕ್ತಿ ಇದೆಯೇ ವಿನಾ ಧನಕ್ಕಿಂತಲೂ ದೇಶದ ಮಾನ ಮುಖ್ಯ ಎಂಬ ಪ್ರಜ್ಞೆ ಇಲ್ಲ. ಭಾರತೀಯ ಆಟಗಾರರ ವಿದೇಶಿ ಕೋಚ್ ಗ್ರೇಗ್ ಚಾಪಲ್ ಅವರು ತಮ್ಮ ಆಟಗಾರರ ಕಳಪೆ ಪ್ರದರ್ಶನದ ಬಗ್ಗೆ ಆಘಾತ ಹೊಂದಿ ಟೀಕಿಸಿದಕ್ಕೆ ಹಿರಿಯ ಆಟಗಾರರು ಕೋಚ್ ಬಗ್ಗೆ ಟೀಕಾಸ್ತ್ರವನ್ನು ಎಸೆದುದ್ದು ಖಂಡನೀಯ. ಭಾರತೀಯ ಕ್ರಿಕೆಟ್ ಮಂಡಳಿ(ಬಿ.ಸಿ.ಸಿ.ಐ)ಆಟಗಾರರ ಬಗ್ಗೆ ಕ್ರಮ ತೆಗೆದುಕೊಳ್ಳುವ ಬದಲು ಬಹುಶಃ ಗ್ರೇಗ್ ಚಾಪಲ್‌ಗೆ ತುಂಬಾ ನೋವನ್ನುಂಟು ಮಾಡಿರಲಿಕ್ಕೂ ಸಾಕು. ಅದಕ್ಕೇ ಅವರು ನಿರ್ಗಮನದ ನಿರ್ಧಾರವನ್ನು ತೆಗೆದುಕೊಂಡಿರಬಹುದು.

ಭ್ರಷ್ಟಾಚಾರವು ಹಾಸು ಹೊಕ್ಕಾಗಿರುವ ನಮ್ಮ ದೇಶದಲ್ಲಿ ಅಪರಾಧಿಗಳು ಶುದ್ಧರಾಗಿ ಹೊರಬಂದು ನಿಷ್ಠಾವಂತರು ಬಲಿಪಶು ಆಗುವುದು ತೀರ ಸಹಜವಾಗಿದೆ. ಒಮ್ಮೆ ಒಬ್ಬ ತರುಣಿ ಮಿನಿ ಸ್ಕರ್ಟ್ ಹಾಕಿಕೊಂಡಿದ್ದಳಂತೆ ಆಕೆಯ ಅಂಗಾಂಗ ಪ್ರದರ್ಶನದಿಂದ ನೊಂದುಕೊಂಡು ಓರ್ವ ಹಿರಿಯರು ಹೀಗೆಲ್ಲ ಮಕ್ಕಳನ್ನು ಬೆಳೆಸಬಾರದು ಎಂದು ಹಿತೋಪದೇಶ ಮಾಡಲು ಆ ಹುಡುಗಿಯ ಮನೆಯನ್ನು ಹುಡುಕಿಕೊಂಡು ಹೋದಾಗ ಅವರ ತಾಯಿ ಬರೀ ಬಿಕಿನಿಯಲ್ಲಿ ಅಡ್ಡಾಡುತ್ತಿದ್ದಳಂತೆ. ಹಾಗೆ ಆಟಗಾರರನ್ನು ನಿಯಂತ್ರಿಸಿಬೇಕಾದ ಬಿ.ಸಿ.ಸಿ.ಐ ಕೂಡ ಕೆಲಸ ಮಾಡುತ್ತಿರುವಂತೆ, ಗ್ರೇಗ್ ಚಾಪಲ್ ಕೋಚ್ ಹುದ್ದೆಯಿಂದ ನಿರ್ಗಮಿಸಿರುವಂತೆ ಕಾಣುತ್ತದೆ. ಟೀಮ್ ಸ್ಪಿರಿಟ್, ವಿಧೇಯತೆ, ಶಿಸ್ತು ಇಲ್ಲದ ಭಾರತೀಯ ಆಟಗಾರರಲ್ಲಿ ಸ್ವಲ್ಪವಾದರೂ ಶಿಸ್ತು ತಂದಂತಹ ಶ್ರೇಷ್ಠ ಕೋಚ್ ಚಾಪಲ್ ಅವರು. ಅವರು ಕೋಚ್ ಆದ ಮೇಲೆ ಬಹಳಷ್ಟು ಪಂದ್ಯಗಳಲ್ಲಿ ಭಾರತ ತಂಡ ಗೆದ್ದಿದೆ. ತಮ್ಮ ತರಬೇತಿಯ ಅವಧಿಯಲ್ಲಿ ಭಾರತವು ವಿಶ್ವ ಕಪ್ ಗೆಲ್ಲಬೇಕು ಎಂಬ ಚಾಪಲ್ಲರ ಕನಸು ನನಸಾಗಲಿಲ್ಲ ಎಂಬ ಕೊರಗಿನೊಡನೆ ಚಾಪಲ್ ನಿರ್ಗಮಿಸಿದ್ದಾರೆ. ಆದರೆ ಭಾರತೀಯ ತಂಡದವರು ಸ್ವಾರ್ಥಿಗಳು, ನಿರಭಿಮಾನಿಗಳು ಆಗಿ ಕಳಪೆ ಆಟದಿಂದ ಎದುರಾಳಿಗಳಿಗೆ ಉತ್ತಮ ಸ್ಪರ್ಧೆ ನೀಡದೆ, ಉದ್ದೇಶ ಪೂರ್ವಕವಾಗಿ ಸೋತು ಅಕ್ಷಮ್ಯ ಅಪರಾಧ ಎಸಗಿ ಖಂಡನಾರ್ಹರಾಗಿದ್ದಾರೆ.

ಇದರಿಂದ ಆದ ಲಾಭ ಒಂದೇ ಒಂದು, ಭಾರತವು ಮೊದಲ ಹಂತದಲ್ಲೇ ಸೋತಿದ್ದರಿಂದ

ಕ್ರಿಕೆಟ್ ಹುಚ್ಚಿನಿಂದ ಪರೀಕ್ಷೆಗೆ ಸರಿಯಾಗಿ ಓದದೆ ಟಿ.ವಿ ಮುಂದೆ ಕುಳಿತುಕೊಳ್ಳುವುದು ತಪ್ಪಿ ವಿದ್ಯಾರ್ಥಿಗಳು ಪಾಠ ಓದಲು ಅನುಕೂಲವಾದುದು.

2. ನಮ್ಮ ಮಠಾಧೀಶರು ಮತ್ತು ಭಕ್ತರ ದೃಷ್ಟಿಕೋನ

ಲಿಂ|| ಡಾ|| ಹಿರೇಮಲ್ಲೂರು ಈಶ್ವರನ್ ಲಿಂಗಾಯತ ಧರ್ಮ ಎನ್ನುವ ವಿದ್ವಾತ್ ಪೂರ್ಣ ಗ್ರಂಥದಲ್ಲಿ ಹೀಗೆ ಒಂದು ಕಡೆ ಬರೆಯುತ್ತಾರೆ. "ಧರ್ಮವು ಹುಟ್ಟುವುದು ಅನುಭಾವದ ನೆಲೆಯಲ್ಲಿ. ಕಾಲಾನಂತರದಲ್ಲಿ ಅನಿವಾರ್ಯ ಅಗತ್ಯವಾಗಿ ಅದು ಸಂಸ್ಥೀಕರಣಗೊಳ್ಳುತ್ತದೆ.(Institutionalise) ಹಾಗೆ ಸಂಸ್ಥೀಕರಣಗೊಂಡಾಗ ಅದರ ಮೂಲ ಅರ್ಥವಂತಿಕೆ ಕಳೆದು ಹೋಗುತ್ತದೆ." ಈ ಭಾವ ಬರುವ ಮಾತುಗಳನ್ನು ಬರೆದಿದ್ದಾರೆ. ನಮ್ಮ ಅನುಭಾವದಲ್ಲೂ ಸರಿ ಎನಿಸುತ್ತದೆ. ಉದಾ: ಯೋಗಿರಾಜ ಶಿವನಿಂದ ಪ್ರತಿಪಾದಿಸಲ್ಪಟ್ಟ ಶೈವದ ಭಾವ ಶ್ರೀಮಂತಿಕೆ ಕಾಲಾನಂತರದಲ್ಲಿ ಆಗಮೀಕರಣಗೊಂಡ ಶೈವದಲ್ಲಿ ಕಾಣಲು ಆಗದು. ಉಪನಿಷತ್ ಋಷಿಗಳ ಜ್ಞಾನದ ತುಡಿತವನ್ನು ಮನುವಿನ ಶಾಸ್ತ್ರದಲ್ಲಿ ನೋಡಲು ಸಾಧ್ಯವಿಲ್ಲ. ಗುರು ಬಸವಣ್ಣನವರ ಮತ್ತು ಅನುಭವ ಮಂಟಪದ ಶರಣ ವಚನಗಳಲ್ಲಿ ಕಾಣುವ ಭಾವ ಶ್ರೀಮಂತಿಕೆಯನ್ನು ಇಂದಿನ ಬಹುಪಾಲು ಮಠಾಧೀಶರ ಆಚರಣೆಯಲ್ಲಿ ಕಾಣಲು ಸಾಧ್ಯವಾಗದು. 'ಮಠ' ಸಂಸ್ಥೀಕರಣಗೊಂಡ ಕೆಲವೊಮ್ಮೆ ಜಡಗಟ್ಟಿದ ಸಂಸ್ಥೆ. ಅದಕ್ಕಾಗಿಯೇ ನಾನು ಆಶ್ರಮ, ಪೀಠ, ಮಿಷನ್ ಎಂಬ ಪದಗಳನ್ನು ಬಳಸಲು ಇಷ್ಟಪಡುವುದು. "ಮಹಾಮನೆ ಮಹಾಮಠ" ಎಂಬ ಪದ ಪುಂಜದಲ್ಲಿ ಮಠ ಎಂಬ ಪ್ರಯೋಗವಿದ್ದರೂ 'ಮಠ' ಪದಕ್ಕೆ ಅಂಟಿದ ಸೀಮಿತ ಚೌಕಟ್ಟನ್ನು ಅದಕ್ಕೆ ವಿಶೇಷಣವಾಗಿ ಸೇರಿಸಿರುವ ಮಹಾಮನೆ ಎಂಬ ಪದ ದಾಟುತ್ತದೆ ಎಂಬ ನಂಬಿಕೆ ನನ್ನದು.

ಈ ಹಿನ್ನೆಲೆ ಏಕೆ ಎಂದರೆ,

"ಕಲ್ಯಾಣ ಜ್ಯೋತಿ" ಯಾತ್ರೆಯು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ನೇತೃತ್ವದಲ್ಲಿ, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳವರ ಮುಂದಾಳತ್ವದಲ್ಲಿ ಜನವರಿ 31ರಂದು ಮಲೆಯ ಮಹದೇಶ್ವರ ಬೆಟ್ಟದಲ್ಲಿ ಆರಂಭವಾಯಿತು. ಈ ಜ್ಯೋತಿ ಯಾತ್ರೆಯ ಸಂಚಾರ ಸಮಯದಲ್ಲಿ ಬಗೆ ಬಗೆಯ ಅನುಭವಗಳ ಸರಮಾಲೆ ಇದಿರ್ಗೊಳ್ಳುತ್ತದೆ. ಒಂದು ಊರಿನಲ್ಲಿ ಕೆಲವು ಸಿರಿವಂತ ಮುಂದಾಳುಗಳು, "ಮಠಾಧಿಕಾರಿಗಳು ಹೀಗೆ ತಿರುಗಬಾರದು. ನಮ್ಮ ಸಮಾಜಕ್ಕೆ ಅವಮಾನ. ನಮ್ಮ ಮಠಾಧೀಶರಿದ್ದಾರೆ ಅವರು ಸೂಚಿಸಿದರೆ ಸಾಕು ಲಕ್ಷಗಟ್ಟಳೆ ಹಣ ಪಾದದ ಬಳಿ ಬಂದು ಬೀಳುತ್ತದೆ." ಎಂದರಂತೆ.

ಮತ್ತೊಂದು ಗ್ರಾಮ; ಅದರಲ್ಲಿ ಶ್ರೀಮಂತರದು 4-6 ಮನೆತನ. ಬಾಕಿ ನೂರಾರು ಮನೆಗಳು ಬಡವರಾದ ಲಿಂಗಾಯತರವು ಕಲ್ಯಾಣ ಜ್ಯೋತಿಯೊಡನೆ ಪೂಜ್ಯ ಗಂಗಾ ಮಾತಾಜಿ ಸಂಚರಿಸುತ್ತಾ ಬಂದಾಗ, "ಅಮ್ಮಾ ನಾವೆಂಥಾ ಪುಣ್ಯವಂತರು! ನಾವು ಬಡವರು ನಮ್ಮ ಮನೆಗೆ ಯಾವ ಮಠಾಧೀಶರು ಬರುತ್ತಾರೆ. ನೀವು ಇಂದು ಬಂದಿದ್ದೀರಿ. ನಮ್ಮ ಸಂತೋಷಕ್ಕೆ ಪಾರವೇ ಇಲ್ಲ." ಇವರಿಗೆ 10ರೂ ಕೊಡಲು ಶಕ್ತಿ ಇಲ್ಲ. ಆದರೆ ಅವರ ಭಾವ ಶ್ರೀಮಂತಿಕೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲವಲ್ಲವೆ? ಯಾವುದು ಆದರ್ಶ? ಕೆಲವು ಶ್ರೀಮಂತ ಭಕ್ತರಿಗೆ ಮಠದಲ್ಲಿ ಕುಳಿತು ಆಜ್ಞೆ ಮಾಡಿದಾಗ ದುಡ್ಡು ಬಂದು ಪಾದದ ಬಳಿ ಬೀಳುವುದು ಆದರ್ಶ. ಬಡ ಭಕ್ತರಿಗೆ ಗುರುವು ಮನೆಗೆ ಬಂದರೆ ಕೈಲಾಸವೇ ಇಳಿದಂತೆ। ಆದರ್ಶವಾದಿ ಎರಡರಲ್ಲಿ ಯಾವ ಆದರ್ಶವನ್ನು, ದಾರಿಯನ್ನು ಆಯ್ಕೆ ಮಾಡಿಕೊಳ್ಳಬೇಕು.

ಮಿಷನರಿ ಸ್ಪಿರಿಟ್, ಧರ್ಮ ಪ್ರಚಾರಕ ಕಳಕಳಿ ಒಂದು ಉದಾತ್ತ ಚಿಂತನೆ. ದೇವರು ಜಗತ್ತಿನ ಮೇಲೆ ಕೃಪೆ ತೋರಿ ಧರ್ಮ ಸ್ಥಾಪಕರನ್ನು ಹುಟ್ಟಿಸುತ್ತಾನೆ. ಅವರು ಮಾನವ ಕುಲದ ಬಗ್ಗೆ ಅನುಕಂಪ ಹೊಂದಿ ಧರ್ಮವನ್ನು ಸ್ಥಾಪಿಸುತ್ತಾರೆ. ಅಂಥ ಧರ್ಮದ ಅನುಯಾಯಿಗಳಾದ ಮಠಾಧೀಶರು ತಾವೂ ಕಳಕಳಿಯಿಂದ ಧರ್ಮ ಪ್ರಚಾರ ಮಾಡಬೇಕು. ವೈದಿಕ, ಯಹೂದಿ ಧರ್ಮಗಳನ್ನು ಬಿಟ್ಟರೆ ಉಳಿದವು ಎಲ್ಲರಿಗೂ ಧಾರ್ಮಿಕ ಹಕ್ಕುಗಳೂ ಲಭ್ಯವಾಗಬೇಕೆಂದು ಬೋಧಿಸುತ್ತವೆ. ಅದರಲ್ಲಿಯೂ ಮಿಷನರಿ ಸ್ಪಿರಿಟ್‌ನಲ್ಲಿ ಮೊಟ್ಟ ಮೊದಲು ಮುಂದಾದುದು ಬೌದ್ಧ ಧರ್ಮ. ಬುದ್ಧನಂತಹ ಒಬ್ಬ ಪ್ರವಾದಿಯೇ

ಊರೂರು ತಿರುಗಿದ, ಭಿಕ್ಷೆ ಬೇಡಿದ, ಮನೆಮನೆಗೂ ಸಂದೇಶ ನೀಡಿದ. ಸಾರ್ವಜನಿಕ ಸ್ಥಳಗಳನ್ನು ಆಯ್ದುಕೊಂಡು ಬೋಧೆ ಮಾಡುತ್ತಿದ್ದ. ನಂತರ ಏಸು ಮತ್ತು ಆತನ ಪ್ರಚಾರಕರು. ಗುರು ಬಸವಣ್ಣನವರು ಪ್ರಮುಖವಾಗಿ ಬೋಧಿಸಿದ್ದು ಧರ್ಮ ಪ್ರಚಾರಕ ಕಳಕಳಿಯುಳ್ಳ ಧರ್ಮವನ್ನು ; ಶ್ರೀಮಂತ ಮಠಾಧೀಶರಾಗಿ ರಾಜಕೀಯ ಪ್ರಭಾವದಿಂದ ಸಮಾಜವನ್ನು ಆಳುವ ಮತ್ತು ಮದಾಂಧ ಶ್ರೀಮಂತ ಭಕ್ತರನ್ನು ಬೆಳೆಸುವುದು ಗುರು ಬಸವಣ್ಣನವರ ಧ್ಯೇಯವಾಗಿರಲಿಲ್ಲ; ಸಮಾಜದ ಅತ್ಯಂತ ನಗಣ್ಯನಾಗಿದ್ದ ತೀರಾ ನಿಕೃಷ್ಟವಾದ ವ್ಯಕ್ತಿ, ಅಸ್ಪೃಶ್ಯನೆಂದು ತಿರಸ್ಕರಿಸಲ್ಪಟ್ಟ ವ್ಯಕ್ತಿ ಪಾಪಿ-ಪತಿತರಾಗಿದ್ದ ವೇಶ್ಯೆ ಎಲ್ಲರ ಬಳಿಗೆ ಧರ್ಮ ಗಂಗೆ ಹರಿಯುವಂತೆ ಮಾಡುವುದೇ ಧರ್ಮಪಿತ ಬಸವಣ್ಣನವರ ಉದ್ದೇಶವಾಗಿತ್ತು. ಬುದ್ಧ-ಏಸು- ಬಸವಣ್ಣ ಇವರವು ಮಾನವೀಯ ಭಾವನೆಗಳಿಂದ ಮಿಡಿಯುವ ಹೃದಯಗಳು.

ಗುರು ಬಸವಣ್ಣನವರು ಕಲ್ಯಾಣದಲ್ಲಿದ್ದರು. ತಾವಾಗಿ ಹೊರಗೆಲ್ಲೂ ಹೋಗಲಿಲ್ಲ ಎಂದೇ ಅನೇಕರ ನಂಬಿಕೆ. ನಾವು ಸಹ ಬಹು ಕಾಲದವರೆಗೆ ಹಾಗೇ ನಂಬಿದುದು. ಸರಿಯಾಗಿ ಅಧ್ಯಯನ ಮಾಡಿದಾಗ ತಿಳಿದು ಬರುತ್ತದೆ. ಅನಿಮಿಷಯ್ಯನಿಗೆ ದೀಕ್ಷೆ ನೀಡಿದುದು ಬನವಾಸಿ ಪ್ರಾಂತ್ಯದ ಬಳ್ಳಿಗಾವಿಯಲ್ಲಿ ; ಕರಸ್ಥಲದ ನಾಗಲಿಂಗದೇವನನ್ನು ಭೇಟಿಯಾದುದು ತಮಿಳು ನಾಡಿನಲ್ಲಿ ; ಸಪಾದ ಲಕ್ಷದ ಮಹಾದೇವನ ಬಳಿಯ 12 ಸಾವಿರ ಜಂಗಮರನ್ನು ಅಲ್ಲಿಗೆ ಹೋಗಿ ಚೀಲದಲ್ಲಿ ತುಂಬಿಕೊಂಡು ಬಂದರಂತೆ ಅರ್ಥಾತ್ ತತ್ವದಿಂದ ಮನವೊಲಿಸಿ ಹೃದಯದಲ್ಲಿ ತುಂಬಿಕೊಂಡು ಬಂದಿದ್ದಾರೆ. ಅಕ್ಕನಾಗಲಾಂಬಿಕೆ ಮತ್ತು ಚನ್ನಬಸವಣ್ಣನವರು ಅಶ್ವಾರೂಢರಾಗಿ ಆಂಧ್ರ-ಮಹಾರಾಷ್ಟ್ರದಲ್ಲಿ ಸಂಚರಿಸಿ, ತಿರುಪತಿಯವರೆಗೆ ಹೋಗಿ ಬಂದುದು ತೆಲಗು ನಾಡಿನ ವೀರ ಬಸವಂತರಾಯ ಎಂಬ ವೈಷ್ಣವ ರಾಜನನ್ನು ಲಿಂಗಾಯತ ಧರ್ಮಕ್ಕೆ ಆಕರ್ಷಿಸಿದುದು ಕಾಲಜ್ಞಾನ ವಚನಗಳಲ್ಲಿ ದಾಖಲೆಯಾಗಿದೆ.

ಮಹಾರಾಷ್ಟ್ರದ ಅಲ್ಲಮ ಪ್ರಭು ಡೋಂಗರ್ (ಗಿರಿ)ಗೆ ಹೋಗಿ ಅಲ್ಲಮ ಪ್ರಭು ದಿವ್ಯಾಲಯದಲ್ಲಿರುವ ಪ್ರಭುದೇವರ ಅಶ್ವಾರೂಢ ಮೂರ್ತಿಗಳನ್ನು ಮತ್ತು ಅಲ್ಲಮ ಪ್ರಭು, ಸಿದ್ಧರಾಮೇಶ್ವರರ ಕುದುರೆಗಳನ್ನು ಕಟ್ಟುತ್ತಿದ್ದ ಜಾಗದಲ್ಲಿ ಗುಡಿ ಕಟ್ಟಿರುವುದನ್ನು ನೋಡಿದಾಗ ಇವರುಗಳು ಎಂಥಾ ಉತ್ಸಾಹದಿಂದ ಧರ್ಮ ಪ್ರಚಾರಕ್ಕಾಗಿ ಸಂಚರಿಸಿದ್ದಾರೆಂಬುದು ಗೋಚರವಾಗುತ್ತದೆ. ಲಿಂಗಾಂಗ ಯೋಗಿ ಸಿದ್ಧರಾಮೇಶ್ವರರು ತುಮಕೂರು ಜಿಲ್ಲೆಯ ನೂರಾರು ಸ್ಥಳಗಳಲ್ಲಿ ಸಂಚರಿಸಿದ್ದು ದಾಖಲೆಯಾಗಿದೆ. ಈ ಉಭಯತರೂ ಕೊಲ್ಹಾಪುರ, ಸಾಂಗ್ಲಿ ಪ್ರದೇಶಗಳಲ್ಲಿ ಸಂಚರಿಸಿರುವುದಕ್ಕೆ ದಾಖಲೆಯಾಗಿ ಶಿರೋಳ ತಾಲ್ಲೋಕಿನ ಊರುಗಳಲ್ಲಿ ಅವರ ಸ್ಥಾನಗಳಿವೆ.

ಆದಿ ಶರಣರ ನಂತರ ಆಗಿ ಹೋದ ಮಹಾನುಭಾವರಲ್ಲಿ ಮುಂಚೂಣಿಯಲ್ಲಿರುವವರು ಮಲೆ ಮಹದೇಶ್ವರರು. ಅವರು ಮಠದ ಅಧಿಕಾರ ತ್ಯಜಿಸಿ ಗುಡ್ಡದಲ್ಲಿ ನೆಲೆಸಿ ಅಲ್ಲಿದ್ದ ಆದಿವಾಸಿಗಳಿಗೆ ಕೃಷಿ ಕಾಯಕ ಕಲಿಸಿದರು, ಧರ್ಮ ಸಂಸ್ಕಾರ ನೀಡಿದರು. ನಂತರ ಮುಪ್ಪಿನ ಷಡಕ್ಷರಿಗಳು, ಸಂತೆ ಕೆಲ್ಲೂರಿನ ಘನ ಮಠದ ಶಿವಯೋಗಿಗಳು, ಇಳಕಲ್ ವಿಜಯ ಮಹಾಂತೇಶ್ವರರು ಮುಂತಾದವರು ಮೈಸೂರು, ಚಾಮರಾಜ ನಗರ ಜಿಲ್ಲೆಯಲ್ಲಿ ಗುರು ಮಲ್ಲೇಶ್ವರರ ಧರ್ಮ ಪ್ರಚಾರದ ಕಳಕಳಿ ಮತ್ತು ವೈಖರಿ ಅಪ್ರತಿಮ. ಅವರುಬೆಳೆಸಿದ ದಾಸೋಹ ಪ್ರಜ್ಞೆ, ಕಟ್ಟಿದ ದಾಸೋಹ ಮಠಗಳು ನಿಜಕ್ಕೂ ಬಸವಣ್ಣನವರ ದಾಸೋಹ ತತ್ವ ಪ್ರತಿರೂಪವಾಗಿವೆ. ಸಿದ್ಧಲಿಂಗೇಶ್ವರರು, ಕರ್ನಾಟಕ, ತಮಿಳುನಾಡು, ಕೇರಳಗಳಲ್ಲಿ ಸಂಚರಿಸಿ ಧರ್ಮ ಪ್ರಚಾರ ಮಾಡಿದ್ದು ಸ್ಮರಣಾರ್ಹ.

ಪೂಜ್ಯ ಲಿಂಗಾನಂದ ಅಪ್ಪಾಜಿ ಊರೂರಿಗೆ ಹೋಗಿ ಧರ್ಮ ಪ್ರಚಾರ ಮಾಡಿದ್ದು ಮಾತ್ರವಲ್ಲದೆ ಬೀದರಿನ ಹಳ್ಳಿ ಹಳ್ಳಿಗಳನ್ನು ಪಾದಯಾತ್ರೆಯ ಮೂಲಕ ಸಂದರ್ಶಿಸಿ ಧರ್ಮ ಜಾಗೃತಿ ಮಾಡಿದ್ದಾರೆ. ಪೂಜ್ಯ ಅಪ್ಪಾಜಿ ಹೇಳಿದ್ದಾರೆ. "ಪ್ರವಚನ ಕಾಯಕ ಒಂದು ದೊಡ್ಡ ತಪಸ್ಸು, ಅದು ಸಮಷ್ಟಿ ತಪಸ್ಸು. ನಾನು ಪ್ರಾರಂಭ ಮಾಡಿದ ಪ್ರವಚನ ಪದ್ಧತಿಯನ್ನು -ತಾವಾಗಿಯೇ ಊರುಗಳಿಗೆ ಹೋಗಿ, ಏರ್ಪಡಿಸಿಕೊಂಡು ಪ್ರವಚನ ಮಾಡುವ ವಿಶೇಷ ಪದ್ಧತಿಯನ್ನು ನನ್ನ ಕಾಲಕ್ಕೇ ನಿಲ್ಲಿಸಬೇಡಿರಿ." ಈ ಆದೇಶಕ್ಕೆ ಅನುಗುಣವಾಗಿಯೇ ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳು ಧರ್ಮ ಪ್ರಚಾರದ ಕಾಯಕ ಕೈಗೊಂಡಿದ್ದಾರೆ; ಪಾದ ಯಾತ್ರೆ ಮಾಡುತ್ತ ಧರ್ಮಜಾಗೃತಿ ಮಾಡುತ್ತಾರೆ. ಇದು (ಆಜ್ಞೆಯ

ಮೂಲಕ ಹಣ ಸಂಗ್ರಹಣೆ ಮಾಡುವ) ಶ್ರೀಮಂತ ಸ್ವಾಮಿಗಳ ಶ್ರೀಮಂತ ಭಕ್ತರಿಗೆ ಭಿಕ್ಷೆ ಬೇಡುವಂತೆ, ಬೀದಿ ತಿರುಗುವಂತೆ ಕಾಣಬಹುದು. ಆದರೆ ನಮಗೆ ಜನ ಸಾಮಾನ್ಯ ಭಕ್ತರನ್ನು ತಲುಪಲು ಇರುವ ಏಕೈಕ ಸರಳ ಮಾರ್ಗ; ಶ್ರೀಮಂತ ಸ್ವಾಮಿಗಳ ಆಜ್ಞೆಗನುಸಾರವಾಗಿ ಬಂದು ಪಾದದ ಬಳಿ ಬೀಳುವ ಕೋಟಿ ರೂಗಿಂತ ಬಡ ಭಕ್ತನೊಬ್ಬ ಸ್ವಯಂ ಪ್ರೇರಣೆಯಿಂದ ಬಿಂದಿಗೆಯಲ್ಲಿ ಹಾಕುವ 10ರೂ ಹೆಚ್ಚು ಪವಿತ್ರ. ಧರ್ಮಪಿತರು ಅಂಥ ದೃಷ್ಟಿಕೋನದ ಸೊಕ್ಕಿನ ಶ್ರೀಮಂತರಿಗೆ ಹೇಳುತ್ತಾರೆ.

ತಿರುಕರೆನ್ನದಿರಿಂ ಭೋ ಎನ್ನ ತಂದೆಗಳನ್ನು
ತಿರುಕರೆನ್ನದಿರಿಂ ಭೋ ಎನ್ನ ಬಂಧುಗಳನ್ನು
ತಿರುಕರೆನ್ನದಿರಿಂ ಭೋ ಎನ್ನ ದೇವರನ್ನು
ತಿರುಕರೆನ್ನದಿರಿಂ ಭೋ ಎನ್ನ ಒಡೆಯರನ್ನು
ದೇಹಿ ಎಂದಡೆ ನಾಸ್ತಿ ಎಂಬುವರ ಬೇಹು
ನೋಡಬಂದ ಕಾಣಾ, ಲಿಂಗದೇವ

ಮದಾಂಧ ಶ್ರೀಮಂತರಿಗೆ ಧರ್ಮ ಪ್ರಚಾರಕ ಜಂಗಮ ಮೂರ್ತಿಗಳು ಭಿಕ್ಷುಕರಂತೆ ಕಾಣಬಹುದು; ಆದರೆ ಬಡ ಭಕ್ತರಿಗೆ ಮಾತ್ರ ಕೈಲಾಸದಿಂದ ಇಳಿದುಬಂದ ಶಿವನಂತೆ, ಅನುಗ್ರಹಿಸಲು ಬಂದ ಬಸವ ತಂದೆಯಂತೆ ಕಾಣುತ್ತದೆ. ಮತ್ತು ಅಂಥ ಮಹಿಮರೇ ಜನರ ಮನದಲ್ಲಿ ನೆಲೆಗೊಂಡು ನಿಲ್ಲುವವರು.

ಒಂದು ಊರಿನಲ್ಲಿ ಸದಾ ಶ್ರೀಮಂತ ಭಕ್ತರಿಂದ, ಮೇಲು ಜಾತಿಯ ಲಿಂಗಾಯತರೆಂದು ಬೀಗುವ ಮಡಿವಂತರಿಂದ ಓಲೈಸಿಕೊಳ್ಳುವ ಒಬ್ಬ ಸ್ವಾಮಿಗಳು ಇದ್ದಾರೆ. ಓರ್ವ ನೇಯ್ಗೆ ಕಾಯಕದ ಲಿಂಗಾಯತ ಶರಣರು ತಮ್ಮ ಮನೆಯ ಒಂದು ಧಾರ್ಮಿಕ ಕಾರ್ಯಕ್ಕೆ ಅವರನ್ನು ಮುಗ್ಧ ಭಕ್ತಿಯಿಂದ ಆಹ್ವಾನಿಸಿದರು. ಗುರುಗಳು ಸಂಕಟ ಪಟ್ಟು ಒಪ್ಪಿದರು. ಪಾದ ಪೂಜೆ, ಪ್ರಸಾದಕ್ಕೆ ಬರುವರೆಂದು ಮನೆಯ ಮಂದಿ, ಆಹ್ವಾನಿತರು ಕಾಯುತ್ತಿದ್ದರು. ದಾರಿಯ ಪಕ್ಕದಲ್ಲೇ ಇದ್ದ ಮನೆ, ಅಷ್ಟು ದೂರದಲ್ಲಿ ಕಾರು ಕಾಣಿಸಿತ್ತು. ಅದು ಮನೆಯ ಮುಂದೆ ನಿಲ್ಲುತ್ತದೆ ಎಂದು ಕಾಯ್ದು ನಿಂತಿರುವಾಗಲೇ ಭರ್ ಎಂದು ಕಾರು ಮುಂದೆ ಸಾಗಿತು. ಸ್ವಾಮಿಗಳು ಟಾ ಟಾ ಎಂದು ಕೈಬೀಸಿ ಹೋಗಿಯೇ ಬಿಟ್ಟರು. ಮನೆಯವರು ಗಾಬರಿಯಾಗಿ ಮಠಕ್ಕೆ ಫೋನ್ ಮಾಡಿದರು, "ಬೆಂಗಳೂರಿನ ಒಬ್ಬ ದೊಡ್ಡ ಮನುಷ್ಯರ ಮನೆಯ ಆಹ್ವಾನ ಬಂದಿತು. ಅನಿವಾರ್ಯವಾಗಿ ಹೋಗಿ ಬಿಟ್ಟರು." ಆ ಮನೆಯವರಿಗೆ ಆಗಿದ್ದ ಆಘಾತ ಅಷ್ಟಿಷ್ಟಲ್ಲ! ಇಂಥ ಕೃತ್ಯಗಳಿಂದ ಜನರಿಗೆ ಧರ್ಮದಲ್ಲಿ, ಗುರುಗಳಲ್ಲಿ ಇರುವ ಭಕ್ತಿ, ಶ್ರದ್ಧೆ ಸಹ ನಶಿಸುವ ಸಾಧ್ಯತೆ ಇರುತ್ತದೆ.

ಕ್ರೈಸ್ತ ಜನರು ಪಾದ್ರಿ, ಗೃಹಸ್ಥರು, ಜನ ಸಾಮಾನ್ಯರು ಎಲ್ಲರೂ ಕ್ರಿಸ್ತನ ಸಂದೇಶ ಪ್ರಚಾರ ಮಾಡಲು ಪಣತೊಟ್ಟು ದುಡಿಯುತ್ತಾರೆ. ಆದ್ದರಿಂದ ಬಸವ ಭಕ್ತರು ಸಹ ಮಠಾಧಿಪತಿಗಳಿಂದ ಧರ್ಮ ಪ್ರಚಾರ ನಿರೀಕ್ಷಿಸದೆ ಅವರ ಪಾಡಿಗೆ ಅವರನ್ನು ಬಿಟ್ಟು ತಾವೇ ಧರ್ಮ ಪ್ರಚಾರಕ್ಕೆ ಅಣಿಯಾಗಬೇಕು. ಎಲ್ಲರಿಗೂ ಬಸವ ತತ್ವದ ಬೋಧೆ ಮಾಡಬೇಕು. ಲಿಂಗಾಯತರ ಬಗ್ಗೆ ಹೆಚ್ಚು ಗಮನ ಕೊಡಬೇಕು. ಏಕೆಂದರೆ ಅವರು ತಮ್ಮ ಧರ್ಮದ ಮೂಲ ಪುರುಷರಾದ ಧರ್ಮಪಿತ ಬಸವಣ್ಣನವರನ್ನು ಆದಿ ಶರಣರನ್ನು ವಚನ ಸಾಹಿತ್ಯವನ್ನು ಮರೆತು ಸರಳತೆ, ಸಮಾನತೆ, ಸಹೋದರತ್ವಗಳನ್ನು ಬಿಟ್ಟು ಆಡಂಬರ, ಅಸಮಾನತೆಗಳನ್ನು ರೂಢಿಸಿಕೊಂಡಿದ್ದಾರೆ. ಇವರಿಗೆ ತಮ್ಮ ಧರ್ಮಗುರುವಿನ ಆಶಯವೇನು ಎಂಬುದನ್ನು ತಿಳಿಸಿಕೊಡುವ ಅಗತ್ಯವಿದೆ. ಹಳಿ ತಪ್ಪಿದ ಮನಸ್ಸುಗಳನ್ನು ಬಸವ ತತ್ವದ ಹಳಿಯ ಮೇಲೆ ಕೂಡಿಸಲು ನಿಷ್ಠಾವಂತರು ಸಿದ್ಧರಾಗಲು ಪವಿತ್ರ ಬಸವ ಜಯಂತಿಯಂದು ಪಣ ತೊಡಿರಿ.

- ಮಾತಾಜಿ

★ ★ ★

ಬಸವ ಕಲ್ಯಾಣದ ಅಲ್ಲಮ ಪ್ರಭು ಶೂನ್ಯ ಪೀಠಕ್ಕೆ 2ನೆಯ ಪೀಠಾಧಿಕಾರಿಯಾಗಿ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ



ಶರಣ ಭೂಮಿ ಬಸವ ಕಲ್ಯಾಣದಲ್ಲಿ ಸ್ಥಾಪನೆಯಾಗಿರುವ ಜಗದ್ಗುರು ಅಲ್ಲಮ ಪ್ರಭು ಶೂನ್ಯ ಪೀಠಕ್ಕೆ ಪೂಜ್ಯ ಅಲ್ಲಮ ಪ್ರಭು ಸ್ವಾಮಿಗಳನ್ನು ಮೊದಲನೆಯ ಅಧಿಕಾರಿಯನ್ನಾಗಿ ಮಾಡಲಾಗಿತ್ತು. ಅವರು ಅನುಷ್ಠಾನಕ್ಕೆ ಹೊರಟು ಹೋದ ಕಾರಣ. ಇದೇ ಮೇ 3ರಂದು ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿಯವರನ್ನು ಎರಡನೆಯ ಅಧಿಕಾರಿಯನ್ನಾಗಿ ಪೀಠಾರೋಹಣ ಮಾಡಿಸಲು ಘೋಷಿಸಲಾಗಿದೆ.

ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳ ಪೂರ್ವಾಶ್ರಮದ ತಾಯಿ-ತಂದೆ ಶರಣ ದಂಪತಿಗಳಾದ ರತ್ನಮ್ಮ ಮತ್ತು ಚಲಿಮಪ್ಪ. ಊರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ. ಸಾತ್ವಿಕರು ಶರಣ ಪಥಿಕರೂ ಅಖಂಡ ಬಸವ ತತ್ವ ನಿಷ್ಠರು, ಕಾಯಕ ಜೀವಿಗಳೂ ಆದ ಮಾತಾ ಪಿತೃಗಳ ಉದರದಲ್ಲಿ 21-1-1969ರಂದು ಜನಿಸಿದ ಸ್ವಾಮೀಜಿಯವರ ಜನ್ಮನಾಮ ಶಿವಾನಂದ. ಚಳ್ಳಕೆರೆಯಲ್ಲಿ ಪ್ರೌಢಶಾಲೆಯವರೆಗೆ, ಮಲ್ಲಾಡಿ ಹಳ್ಳಿಯಲ್ಲಿ ಪಿ.ಯು.ಸಿ ನಂತರ ಬಿ.ಕಾಂ ಚಿತ್ರದುರ್ಗದಲ್ಲಿ ಓದಿದರು. ವಿದ್ಯಾರ್ಥಿಯಾಗಿದ್ದಾಗ 1984ರಲ್ಲಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಅಪ್ಪಾಜಿಯವರ ಪ್ರವಚನ ಕೇಳಿ ಪ್ರಭಾವಿತರಾಗಿ ಪೂಜ್ಯರಿಂದ 1992ರಲ್ಲಿ ಇಷ್ಟಲಿಂಗ ದೀಕ್ಷೆ ಪಡೆದು, ನಂತರ ವೈರಾಗ್ಯದ ಜೀವನ ಸ್ವೀಕರಿಸಲು ನಿರ್ಧರಿಸಿದರು. 1997ರಲ್ಲಿ ಜಂಗಮ ದೀಕ್ಷೆ ಹೊಂದಿ, ಪೂಜ್ಯ ಸಿದ್ಧರಾಮೇಶ್ವರ ಸ್ವಾಮಿಗಳು ಎಂಬ ಹೆಸರು ಹೊಂದಿದರು. ಇವರಲ್ಲಿರುವ ಕಾಯಕ ನಿಷ್ಠೆ, ಶ್ರಮ ಜೀವನದ ಆಸಕ್ತಿ ನೋಡಿಯೇ ಬಸವ ಯೋಗಿ ಶ್ರೀ ಸಿದ್ಧರಾಮೇಶ್ವರರ ಹೆಸರನ್ನು ಇವರಿಗೆ ಇಡಲಾಯಿತು.

ಕೂಡಲ ಸಂಗಮದ ಮಹಾಮನೆಯ ಶರಣ ಲೋಕ, ಬಸವ ಕಲ್ಯಾಣದ ಬಸವ ಮಹಾಮನೆ, ಶರಣ ಶೈಲದ ಮೇಲೆ ರೂಪುಗೊಳ್ಳುತ್ತಿರುವ ಶರಣ ಲೋಕದ ರೂವಾರಿಗಳು ಪೂಜ್ಯ ಸ್ವಾಮೀಜಿಯವರೆ. ಈ ದಿಶೆಯಲ್ಲಿ ಅಪಾರ ತಾಂತ್ರಿಕ ಜ್ಞಾನ ಹೊಂದಿರುವ ಸ್ವಾಮೀಜಿ ಹೊಸ ಹೊಸ ಪರಿಕಲ್ಪನೆ ಹೊಂದಿ ಅವುಗಳನ್ನು ಸಾಕಾರಗೊಳಿಸುತ್ತಿದ್ದಾರೆ. ಹಗಲಿರುಳು ಎನ್ನದೆ ಬಸವ ಕಲ್ಯಾಣದ ಮಹಾಮನೆಯಲ್ಲಿ ಕಾಯಕ ಯೋಗಿಗಳಾಗಿ ದುಡಿಯುವ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿಯವರ ಬಗ್ಗೆ ಬೀದರ, ಗುಲಬರ್ಗಾ, ಹೈದ್ರಾಬಾದ್, ಜಹಿರಾಬಾದ್, ಉದಗೀರ್ ಶರಣರಿಗೆ ಬಹಳ ಅಭಿಮಾನ. ಏಕೆಂದರೆ ಅವರ ಶ್ರದ್ಧೆ, ನಿಷ್ಠೆ, ಪರಿಶ್ರಮಗಳನ್ನು ಅವರುಗಳು ಪ್ರತ್ಯಕ್ಷವಾಗಿ ನೋಡುತ್ತಿರುತ್ತಾರೆ.

ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ ನಿಂತು ಕಾಯಕದೊಡನೆ ಜ್ಞಾನ ಬೋಧೆಯನ್ನು ಮಾಡುತ್ತ ಜನ ಪ್ರಿಯತೆ ಗಳಿಸುತ್ತಿರುವ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ-ಯವರಿಂದ ಹೆಚ್ಚಿನ ಕಾರ್ಯವಾಗುತ್ತ ಅವರು ಕೀರ್ತಿ ಶಾಲಿಗಳಾಗಲೆಂದು ಹಾರೈಸೋಣ.

-ಮಾತಾಜಿ

ವಚನ ದುಂದುಭಿ

ಕಲ್ಯಾಣ ಕಿರಣದಲ್ಲಿ ವಚನ ದುಂದುಭಿ ಎನ್ನುವ ಹೊಸ ಅಂಕಣವೊಂದನ್ನು ಪ್ರಾರಂಭಿಸಲಾಗಿದ್ದು ಇದು ಇನ್ನು ಮುಂದೆ ಪ್ರತಿ ತಿಂಗಳೂ ಪ್ರಕಟಿಸಲಾಗುವುದು. ಇದರಲ್ಲಿ ಪ್ರತಿ ತಿಂಗಳು 20/25 ಪ್ರಶ್ನೆಗಳು ಪ್ರಕಟವಾಗುತ್ತದೆ. ಪ್ರತಿ ವರ್ಷ ಕಲ್ಯಾಣ ಪರ್ವ ಮತ್ತು ಶರಣ ಮೇಳದಲ್ಲಿ ನಡೆಯುವ ಧಾರ್ಮಿಕ ರಸ ಪ್ರಶ್ನೆ ಕಾರ್ಯಕ್ರಮದಲ್ಲಿ ಈ ಅಂಕಣದಲ್ಲಿ ಪ್ರಕಟವಾದ ಪ್ರಶ್ನೆಗಳನ್ನು ಕೇಳಲಾಗುವುದು. ಮತ್ತು ಈ ಪ್ರಶ್ನೆಗಳಿಗೆ ಸರಿ ಉತ್ತರಗಳನ್ನು ತಾವು ಅಂಚೆ ಕಾರ್ಡ್‌ನಲ್ಲಿ ಬರೆದು, ವಚನ ದುಂದುಭಿ ವಿಭಾಗ ಎಂದು ಬರೆದು ಕಲ್ಯಾಣ ಕಿರಣ ಕಾರ್ಯಾಲಯಕ್ಕೆ ಕಳುಹಿಸಬೇಕು. ಸರಿಯುತರ ಕೊಟ್ಟವರ ಹೆಸರುಗಳನ್ನು ಕಲ್ಯಾಣ ಕಿರಣ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಪ್ರಶ್ನೆಗಳು

1. ಗುರು ಬಸವಣ್ಣನವರು 64 ಶೀಲದಲ್ಲಿ ನಡೆದು ತೋರಿದ್ದಾರೆ ಎಂದು ಹೇಳಿದವರು ಯಾರು ?
2. ಎಷ್ಟನೇ ಶರಣ ಮೇಳದಲ್ಲಿ ಬಸವ ಧರ್ಮ ಪೀಠ ಸ್ಥಾಪನೆಯಾಯಿತು ?
3. ಕೈವಲ್ಯ ಕಲ್ಪವಲ್ಲರಿ ಗ್ರಂಥದ ಕರ್ತೃ ಯಾರು ?
4. ಭಾವ ತ್ರಯಗಳು ಯಾವುವು ?
5. ಬಹುರೂಪಿ ಚೌಡಯ್ಯನವರ ವಚನಾಂಕಿತ ಯಾವುದು ?
6. ಚಂದೇಶ್ವರ ಲಿಂಗ ಯಾರ ವಚನಾಂಕಿತ ?
7. ಪೂಜ್ಯ ಮಾತಾಜಿಯವರ ತಾಯಿ-ತಂದೆಯ ಹೆಸರೇನು ?
8. ಘಟ್ಟಿವಾಳಯ್ಯನವರು ಯಾವ ಕಾಯಕ ಮಾಡುತ್ತಿದ್ದರು ?
9. ನೀಲ ಗಂಗಮ್ಮನ ಐಕ್ಯಸ್ಥಲ ಯಾವುದು ?
10. ತ್ರಿಕರಣಗಳು ಯಾವುವು ?
11. ಅಷ್ಟ ತನುಗಳು ಯಾವುವು ?
12. ಶಿವಾಜಿ ಮಹಾರಾಜರ ಪೂರ್ವಜರ ಊರು ಯಾವುದು ?
13. ಶರಣರ ಸಂಗದಿಂದ ಅಗಲುವುದಕ್ಕಿಂತ ಸಾಯುವುದೇ ಲೇಸೆಂದು ಶರಣರ ಸಂಗದ ಮಹತ್ವ ಹೇಳಿದವರು ಯಾರು ?
14. ಲಿಂಗಾಯತ ಧರ್ಮದ ಅರ್ಥಶಾಸ್ತ್ರ ತಿಳಿಸುವ ಆಚಾರ ಯಾವುದು ?
15. ಶಿವಶರಣೆಯರ ವಚನಗಳು ಎಷ್ಟು ದೊರಕಿವೆ ?
16. ಪ್ರಭುದೇವರು, ಸಿದ್ಧರಾಮರೊಡಗೂಡಿ ಕಲ್ಯಾಣಕ್ಕೆ ಬಂದರು, ಅಲ್ಲಿಯವರಗೂ ಅವರು ಬಸವಣ್ಣನವರನ್ನು ನೋಡಿರಲ್ಲಿಲ್ಲ, ಆದರೂ ಪರಮಾರಾಧ್ಯಎಂದು ನಂಬಿದರು ಏಕೆ ?
17. ತೋಂಟದ ಸಿದ್ಧಲಿಂಗೇಶ್ವರರು ಯಾರನ್ನು ತಮ್ಮ ಉತ್ತರಾಧಿಕಾರಿಯಾಗಿ ನೇಮಿಸಿದರು ?
18. ತನ್ನ ತಾನರಿದವಂಗೆ ಅರಿವೇ ಗುರು........ಗುರು ತಾನಾದಡೆ ಗುರುವಿಡಿದಿರ ಬೇಕು ಎನ್ನ ಅಜಗಣ್ಣ ತಂದೆಯಂತೆ. ಯಾರು ಯಾರಿಗೆ ಹೇಳಿದರು ?
19. ಅನಿಮಿಷಂಗೆ ಲಿಂಗವ ಕೊಟ್ಟಾತ ಬಸವಣ್ಣ ಆ ಲಿಂಗ ನಿನಗೆ ಸೇರಿತ್ತಾಗಿ ಬಸವಣ್ಣನ ಸಂಪ್ರದಾಯದ ಕಂದನು ನೋಡಾ ನೀನು - ಯಾರು ಯಾರಿಗೆ ಹೇಳಿದರು?
20. ಕೈಸಿರಿಯ ದಂಡವ ಕೊಳ್ಳಬಹುದಲ್ಲದೆ ಮೈಸಿರಿಯ ದಂಡವ ಕೊಳ್ಳಬಹುದೆ ? ಯಾರು ಯಾರಿಗೆ ಹೇಳಿದರು ?
21. ಅದ್ವೈತವ ನುಡಿದು ಅಹಂಕಾರಿಯಾದೆ; ಈ ವಚನ ಹೇಳಿದ ಶರಣ ಯಾರು ?
22. ಮಾಂಸ ಪಿಂಡವೆಂದೆನಿಸದೆ ಮಂತ್ರ ಪಿಂಡವೆಂದೆನಿಸಿದನು ಬಸವಣ್ಣ, ಇದು ಯಾರ ವಚನ ?
23. ಕೋಟಿ ರವಿ ಶಶಿಗಳಿಗೆ ಮೀಂಟಿದ ಪ್ರಭೆ ಬಂದು.... ಇದು ಯಾರ ವಚನ ?
24. ಜಗದ್ಗುರು ಅಲ್ಲಮಪ್ರಭು ಯೋಗ ಪೀಠವನ್ನು ಎಲ್ಲಿ ಎಂದು ಸ್ಥಾಪಿಸಲಾಯಿತು. ?
25. ಜಗದ್ಗುರು ಅಲ್ಲಮಪ್ರಭು ಯೋಗ ಪೀಠದ ಪ್ರಥಮ ಪೀಠಾಧೀಶರು ಯಾರು ?

ವಚನ ದುಂದುಭಿ-1ರ ಸರಿ ಉತ್ತರಗಳು

1. ಜಗನ್ಮಾತಾ ಅಕ್ಕಮಹಾದೇವಿ
2. ನುಡಿ, ದೃಷ್ಟಿ, ಹಸ್ತ, ಮನ, ಭಾವ ಪರುಷ
3. ಶ್ರದ್ಧಾ, ನಿಷ್ಠಾ, ಅವಧಾನ, ಅನುಭಾವ, ಆನಂದ, ಸಮರಸ, ನಿರವಯ, ನಿಶೂನ್ಯ ನಿರಂಜನ
4. ಸ್ವಯ ಜಂಗಮ, ಚರ ಜಂಗಮ, ಪರ ಜಂಗಮ
5. ಶರಣೆ ಅಕ್ಕಮ್ಮನವರ ವಚನಾಂಕಿತ
6. ಪ್ರಭುದೇವರು ಅಕ್ಕಮಹಾದೇವಿಯವರಿಗೆ
8. ಮಡಿವಾಳ ಮಾಚಿದೇವರು
9. ಹರಗಣ ಪಂಕ್ತಿಯ ನಡುವೆ ಕುಳಿರ್ದು (ಬ.ವ.ದಿ 437)
10. ಮಲೆ ಮಹದೇಶ್ವರರು
11. ಹರ್ಡೇಕರ್ ಮಂಜಪ್ಪನವರು
12. ಮಮಕಾರ- ಮೋಹಿನಿ
13. ಜಗನ್ಮಾತಾ ಅಕ್ಕಮಹಾದೇವಿ
14. ಬಸವ ಯೋಗಿ ಸಿದ್ಧರಾಮೇಶ್ವರರು
15. ಸರ್ವಜ್ಞ ಕವಿ
16. ಚಿನ್ಮಯ ಜ್ಞಾನಿ ಚನ್ನಬಸವಣ್ಣನವರಿಗೆ
17. ಗುರು ದ್ರೋಹ, ಲಿಂಗ ದ್ರೋಹ, ಜಂಗಮ ದ್ರೋಹ
18. ಶಾಂತರಸ
19. ಡಾ॥ ಸರ್ವಪಲ್ಲಿ ರಾಧಾಕೃಷ್ಣನ್
20. ಮೈಲಾರ ಬಸವ ಲಿಂಗ ಶರಣರು
21. ಮಧುಕೇಶ್ವರ
22. ಗಂಗಾ ತರಂಗ
23. ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೋಕಿನ ಬಿಜನಳ್ಳಿ
24. ಲಿಂಗಾಂಗಯೋಗಿ ಸಿದ್ಧರಾಮೇಶ್ವರ, ನುಲಿಯ ಚಂದಯ್ಯನವರು
25. ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ

ವಚನ ದುಂದುಭಿ - 1ರ ಸರಿಯುತ್ತರ ನೀಡಿದವರು

1. ಶಾರದ ಬಸವರಾಜು, ಭದ್ರಾವತಿ
2. ಸುವರ್ಣ. ವೈ.ಪಿ. ಭದ್ರಾವತಿ
3. ಹೆಚ್.ಚಂದ್ರಿಕಾ, ಭದ್ರಾವತಿ
4. ಎಸ್.ನಾಗಮ್ಮ ,ಭದ್ರಾವತಿ
5. ರೂಪ ಜಗದೀಶ್, ಭದ್ರಾವತಿ
6. ವಿಜಯಾ ರಾಜು, ಭದ್ರಾವತಿ
7. ಎಸ್.ಎನ್.ನಂದರಗಿ,ಧಾರವಾಡ
8. ವೀರಣ್ಣ ಲಿಂಗಾಯತ
9. ಶಶಿ.ಕುಮಾರ್, ಭದ್ರಾವತಿ
10. ಕಾಶವ್ವ ರು.ತೋಟಗಿ

ಆದಿ ಶರಣರ ಸ್ಮರಣೆ

ಶರಣ ಭೂಮಿ ಬಸವ ಕಲ್ಯಾಣದಲ್ಲಿ 2ನೆಯ ದಿವಸ ಅಂದರೆ ಪ್ರತಿ ವರ್ಷದ ಮೇ 2 ರಂದು ಆದಿ ಶರಣರನ್ನು ಸ್ಮರಿಸಿಕೊಂಡು ಅವರಿಗೆ ಶರಣು ಸಲ್ಲಿಸುವ ಪವಿತ್ರ ಧಾರ್ಮಿಕ ವಿಧಿಯು ನಡೆಯುತ್ತದೆ. ಲಭ್ಯವಿರುವ ಶರಣರ ಹೆಸರುಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಷಟ್ ಸಂಜ್ಞೆಗಳು :

ಅಷ್ಟಾವರಣವು ಎಂಟು ಷಡಾಚಾರಗಳು ಆರು
ಷಟ್‌ಸ್ಥಲಗಳೂ ಆರು ಷಟ್‌ಸೂತ್ರಗಳು ಆರು
ಷಟ್‌ಶೀಲಗಳು ಆರು ಷಟ್‌ಕ್ರಿಯೆಗಳು ಆರು
ಷಟ್ ಸಂಜ್ಞೆಗಳು ಆರು ಎಂದು ನೆನೆಯುವೆನು ॥

ಜಯ ಜಯ ಘನಲಿಂಗ ಜಯ ಜಯ ಮಂಗಳಾಂಗ
ಜಯತು ಜಯ ಬಸವ ಗುರು ಪ್ರಾಣೇಶ ಲಿಂಗ
ಜಯ ಭಕ್ತವತ್ಸಲ ಇಷ್ಟಪ್ರದಾಯಕ
ಜಯ ಸಚ್ಚಿದಾನಂದ ಜಯ ಲಿಂಗದೇವ ॥

1. ಸೃಷ್ಟಿಕರ್ತ ಲಿಂಗದೇವನಿಗೆ ಶರಣು, ಶರಣು ಶರಣಾರ್ಥಿ
2. ಲಿಂಗಾಯತ ಧರ್ಮಕರ್ತ ಗುರು ಬಸವಣ್ಣನವರಿಗೆ ಶರಣು, ಶರಣು ಶರಣಾರ್ಥಿ
3. ಶೂನ್ಯಪೀಠಾಧೀಶ ಅಲ್ಲಮಪ್ರಭುದೇವರಿಗೆ ಶರಣು, ಶರಣು ಶರಣಾರ್ಥಿ
4. ಚಿನ್ಮಯಜ್ಞಾನಿ ಚನ್ನಬಸವಣ್ಣನವರಿಗೆ ಶರಣು, ಶರಣು ಶರಣಾರ್ಥಿ
5. ಲಿಂಗಾಂಗಯೋಗಿ ಸಿದ್ಧರಾಮೇಶ್ವರರಿಗೆ ಶರಣು, ಶರಣು ಶರಣಾರ್ಥಿ
6. ವೀರ ವಿರಾಗಿಣಿ ಅಕ್ಕಮಹಾದೇವಿಗೆ ಶರಣು, ಶರಣು ಶರಣಾರ್ಥಿ
7. ವೀರ ಗಣಾಚಾರಿ ಮಡಿವಾಳ ಮಾಚಿದೇವರಿಗೆ ಶರಣು, ಶರಣು ಶರಣಾರ್ಥಿ
8. ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕಾ ತಾಯಿಗೆ ಶರಣು, ಶರಣು ಶರಣಾರ್ಥಿ
9. ದಾಸೋಹಮೂರ್ತಿ ನೀಲಾಂಬಿಕಾತಾಯಿಗೆ ಶರಣು, ಶರಣು ಶರಣಾರ್ಥಿ
10. ಹುತಾತ್ಮ ಚೇತನ ಹರಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
11. ಧೀರ ಶರಣೆ ಕಲ್ಯಾಣಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
12. ಧೀರ ಶರಣ ಮಧುವರಸರಿಗೆ ಶರಣು, ಶರಣು ಶರಣಾರ್ಥಿ
13. ಧೀರ ಶರಣ ಶೀಲವಂತಯ್ಯನಿಗೆ ಶರಣು, ಶರಣು ಶರಣಾರ್ಥಿ
14. ಧೀರ ಶರಣೆ ಲಾವಣ್ಯವತಿಗೆ ಶರಣು, ಶರಣು ಶರಣಾರ್ಥಿ
15. ಪರಮ ಪ್ರಸಾದಿ ಡೋಹಾರ ಕಕ್ಕಯ್ಯನವರಿಗೆ ಶರಣು, ಶರಣು ಶರಣಾರ್ಥಿ
16. ತತ್ತ್ವನಿಷ್ಠುರಿ ಅಂಬಿಗ ಚೌಡಯ್ಯನವರಿಗೆ ಶರಣು, ಶರಣು ಶರಣಾರ್ಥಿ
17. ರಾಜಯೋಗಿ ಮೋಳಿಗೆ ಮಾರಯ್ಯನವರಿಗೆ ಶರಣು, ಶರಣು ಶರಣಾರ್ಥಿ
18. ಆದರ್ಶಸತಿ ಮೋಳಿಗೆ ಮಹಾದೇವಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
19. ಅಂಗಸೋಂಕಿನ ಲಿಂಗ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
20. ಅಣತಿಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
21. ಅಗ್ಘವಣಿಯ ಹಂಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
22. ಹಡಪದ ಅಪ್ಪಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
23. ನಿಜಲಿಂಗಯೋಗಿ ಅಜಗಣ್ಣ ತಂದೆಗಳಿಗೆ ಶರಣು, ಶರಣು ಶರಣಾರ್ಥಿ
24. ಅನಾಮಿಕ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
25. ಅಪ್ಪಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
26. ಅಮರ ಗುಂಡದ ಮಲ್ಲಿಕಾರ್ಜುನ ತಂದೆಗೆ ಶರಣು, ಶರಣು ಶರಣಾರ್ಥಿ
27. ಸ್ವಾಭಿಮಾನ ನಿಧಿ ಅಮುಗಿದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
28. ಅರಿವಿನ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
29. ಅವಸರದ ರೇಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
30. ಸೌರಾಷ್ಟ್ರದ ಆದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
31. ಆನಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
32. ಆಯ್ದಕ್ಕಿ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
33. ನಿಸ್ವಾರ್ಥಸತಿ ಆಯ್ದಕ್ಕಿ ಲಕ್ಕಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
34. ಉಗ್ಘಡಿಸುವ ಗಬ್ಬಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
35. ಉಪ್ಪರಗುಡಿಯ ಸೋಮಿದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
36. ಮಹಾಜ್ಞಾನಿ ಉರಿಲಿಂಗದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
37. ಚಿನ್ಮಯ ಶರಣ ಉರಿಲಿಂಗಪೆದ್ದಿ ಗುರುವಿಗೆ ಶರಣು, ಶರಣು ಶರಣಾರ್ಥಿ
38. ಉಳಿಯುಮೇಶ್ವರ ಚಿಕ್ಕಣ್ಣನವರಿಗೆ ಶರಣು, ಶರಣು ಶರಣಾರ್ಥಿ
39. ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
40. ಎಲೆಗಾರ ಕಾಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
41. ಏಕಾಂತದ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
42. ಏಲೇಶ್ವರದ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
43. ಒಕ್ಕಲಿಗ ಮುದ್ದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
44. ಕಳಿಂಗದೇಶದ ಸುಜ್ಞಾನಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
45. ಲಮಾಣಿ ನಾಯಕ ನನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
46. ಗುಡ್ಡಾಪುರದ ದಾನಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
47. ವಚನಕಾರ್ತಿ ಅಕ್ಕಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
48. ಜ್ಞಾನನಿಧಿ ವೀರಸಂಗವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
49. ಉದಾರ ಹೃದಯಿ ಚಂಗಳೆ ತಾಯಿಗೆ ಶರಣು, ಶರಣು ಶರಣಾರ್ಥಿ
50. ಲಿಂಗಪ್ರಾಣಿ ಕಮಳವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
51. ಭಕ್ತಿನಿಧಿ ಶರಣೆ ಸೋಮವ್ವೆಗೆ ಶರಣು, ಶರಣು ಶರಣಾರ್ಥಿ
52. ಸದಾಚಾರ ಸಂಪನ್ನೆ ಚೋಳಿಯಕ್ಕನಿಗೆ ಶರಣು, ಶರಣು ಶರಣಾರ್ಥಿ
53. ಜಂಗಮ ದಾಸೋಹಿ ನಿಂಬಿಯಕ್ಕನಿಗೆ ಶರಣು, ಶರಣು ಶರಣಾರ್ಥಿ
54. ದಾಸಿಮಯ್ಯಗಳ ಸತಿ ದುಗ್ಗಳೆಗೆ ಶರಣು, ಶರಣು ಶರಣಾರ್ಥಿ
55. ಶರಣ ಪ್ರೇಮಿ ಸುಗ್ಗಲವ್ವ ತಾಯಿಗೆ ಶರಣು, ಶರಣು ಶರಣಾರ್ಥಿ
56. ಧೀರ ಶರಣೆ ಅಮುಗೆ ರಾಯಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ

57. ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಶರಣೆ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
58. ನಾಗಿಮಯ್ಯಗಳ ಪುಣ್ಣ ಸ್ತ್ರೀ ಮಸಣಮ್ಮನಿಗೆ ಶರಣು, ಶರಣು ಶರಣಾರ್ಥಿ
59. ಕದಿರೆಯ ಕಾಯಕದ ಶರಣೆ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
60. ಕದಿರೆ ರೆಮ್ಮವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
61. ಕನ್ನಡಿ ಕಾಯಕದ ಶರಣೆ ರೇಮಮ್ಮನಿಗೆ ಶರಣು, ಶರಣು ಶರಣಾರ್ಥಿ
62. ಕಾಟಕೂಟಯ್ಯಗಳ ಪುಣ್ಯ ಸ್ತ್ರೀ ಶರಣೆ ರೇಚವ್ವೆಗೆ ಶರಣು, ಶರಣು ಶರಣಾರ್ಥಿ
63. ಕಾಲಕಣ್ಣಿಯ ಕಾಯಕದ ಶರಣೆ ತಾಯಮ್ಮನಿಗೆ ಶರಣು, ಶರಣು ಶರಣಾರ್ಥಿ
64. ಕೊಂಡೆ ಮಂಚಣ್ಣಗಳ ಪುಣ್ಣ ಸ್ತ್ರೀ ಲಕ್ಷ್ಮಮ್ಮನಿಗೆ ಶರಣು, ಶರಣು ಶರಣಾರ್ಥಿ
65. ಕೊಟ್ಟಣ ಕಾಯಕದ ಶರಣೆ ಸೋಮಮ್ಮನಿಗೆ ಶರಣು, ಶರಣು ಶರಣಾರ್ಥಿ
66. ಗಜೇಶ ಮಸಣಯ್ಯಗಳ ಪುಣ್ಯ ಸ್ತ್ರೀ ಶರಣೆಗೆ ಶರಣು, ಶರಣು ಶರಣಾರ್ಥಿ
67. ಗುಂಡಯ್ಯಗಳ ಪುಣ್ಯ ಸ್ತ್ರೀ ಕೇತಲದೇವಿಗೆ ಶರಣು, ಶರಣು ಶರಣಾರ್ಥಿ
68. ಡೋಹರ ಕಕ್ಕಯ್ಯನವರ ಪುಣ್ಯ ಸ್ತ್ರೀ ಭಿಷ್ಟಾದೇವಿಗೆ ಶರಣು, ಶರಣು ಶರಣಾರ್ಥಿ
69. ಶರಣೆ ಗೊಗ್ಗವ್ವೆಗೆ ಶರಣು, ಶರಣು ಶರಣಾರ್ಥಿ
70. ದಸರಯ್ಯಗಳ ಪುಣ್ಯ ಸ್ತ್ರೀ ವೀರಮ್ಮಗೆ ಶರಣು, ಶರಣು ಶರಣಾರ್ಥಿ
71. ಬತ್ತಲೇಶ್ವರಯ್ಯಗಳ ಪುಣ್ಯ ಸ್ತ್ರೀ ಗುಡ್ಡವ್ವೆಗೆ ಶರಣು, ಶರಣು ಶರಣಾರ್ಥಿ
72. ಬಾಚಿಕಾಯಕದ ಬಸವಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
73. ನಿಜ ಮುಕ್ತೆ ಶರಣೆ ಮುಕ್ತಾಯಕ್ಕಗೆ ಶರಣು, ಶರಣು ಶರಣಾರ್ಥಿ
74. ರಾಯಸದ ಮಂಚಣ್ಣಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
75. ಕಾಶ್ಮೀರದ ರಾಜಪುತ್ರಿ ಬೊಂತಾದೇವಿಗೆ ಶರಣು, ಶರಣು ಶರಣಾರ್ಥಿ
76. ರೇವಣಸಿದ್ದಯ್ಯಗಳ ಪುಣ್ಯ ಸ್ತ್ರೀ ರೇಕಮ್ಮನಿಗೆ ಶರಣು, ಶರಣು ಶರಣಾರ್ಥಿ
77. ಧೀಮಂತ ಶರಣೆ ಸತ್ಯಕ್ಕನಿಗೆ ಶರಣು, ಶರಣು ಶರಣಾರ್ಥಿ
78. ಸಿದ್ದಬುದ್ದಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
79. ಸದಾಚಾರ ಪಥ ಹಿಡಿದ ಸೂಳೆ ಸಂಕವ್ವೆಗೆ ಶರಣು, ಶರಣು ಶರಣಾರ್ಥಿ
80. ಹಡಪದ ಅಪ್ಪಣ್ಣಗಳ ಪುಣ್ಯ ಸ್ತ್ರೀ ಲಿಂಗಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
81. ಮಾರಯ್ಯಗಳ ಪುಣ್ಯ ಸ್ತ್ರೀ ಗಂಗಮ್ಮನಿಗೆ ಶರಣು, ಶರಣು ಶರಣಾರ್ಥಿ
82. ಸತ್ಯಸದಾಚಾರದ ಪಥ ಹಿಡಿದ ಮಾಯಿದೇವಿಗೆ ಶರಣು, ಶರಣು ಶರಣಾರ್ಥಿ
83. ನಾಗಲಾಂಬಿಕಾ ಪತಿ ಶಿವದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
84. ಎಳೆವರೆಯದಲ್ಲೇ ಲಿಂಗದೊಡಗೂಡಿದ ಬಾಲ ಸಂಗಯ್ಯನಿಗೆ ಶರಣು, ಶರಣು ಶರಣಾರ್ಥಿ
85. ಕಂಬದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
86. ಕನ್ನಡಿ ಕಾಯಕದ ಅಮ್ಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
87. ಕನ್ನದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
88. ಕರುಳ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
89. ಕಲಕೇತ ಶರಣರಿಗೆ ಶರಣು, ಶರಣು ಶರಣಾರ್ಥಿ
90. ಕಾಮಾಟದ ಭೀಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
91. ಕಿನ್ನರಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
92. ಕೀಲಾರದ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
93. ಕೇದಾರ ಗುರು ಶರಣರಿಗೆ ಶರಣು, ಶರಣು ಶರಣಾರ್ಥಿ

94. ಕೂಗಿನ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
95. ಕೊಟಾರದ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
96. ಕೋಲ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
97. ಗಜೇಶ ಮಸಣಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
98. ಗಣದಾಸಿ ವೀರಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
99. ರಾಯಸದ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
100.ಗೋರಕ್ಷನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
101.ತೆಲಗು ಜೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
102.ಶಿವಲೆಂಕ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
103.ಬೊಕ್ಕಸದ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
104.ಗಾಣದ ಕನ್ನಪ್ಪ ಶರಣರಿಗೆ ಶರಣು, ಶರಣು ಶರಣಾರ್ಥಿ
105.ಗಾವುದಿ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
106.ಗುಪ್ತ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
107.ಗುರುಪುರದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
108.ಗುರುಭಕ್ತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
109.ಘಟ್ಟಿವಾಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
110.ಚಂದಿಮರಸ ಶರಣರಿಗೆ ಶರಣು, ಶರಣು ಶರಣಾರ್ಥಿ
111.ಜೇಡರ ದಾಸಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
112.ಜೋದರ ಮಾಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
113.ಢಕ್ಕೆಯ್ಯ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
114.ಗಣಪ್ರಸಾದಿ ಡೋಹರ ಕಕ್ಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
115.ತಳವಾರ ಕಾಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
116.ತುರುಗಾಹಿ ರಾಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
117.ತೆಲುಗೇಶ ಮಸಣಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
118.ದಶಗಣ ಸಿಂಗಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
119.ಅಹಿಂಸಾವಾದಿ ದಸರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
120.ದಾಸೋಹದ ಸಂಗಣ್ಣ ಶರಣರಿಗೆ , ಶರಣು, ಶರಣು ಶರಣಾರ್ಥಿ
121.ನಗೆಯ್ಯ ಮಾರಿತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
122.ನಿಜಗುಣ ಶಿವಯೋಗಿ ಶರಣರಿಗೆ ಶರಣು, ಶರಣು ಶರಣಾರ್ಥಿ
123.ನಿವೃತ್ತಿ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
124.ನಿಜಾನುಭಾವಿ ಸುಲಿಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
125.ರೇವಣ ಸಿದ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
126.ಮಲ್ಲಿಕಾರ್ಜುನ ಪಂಡಿತಾರಾಧ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
127.ಮರುಳುಸಿದ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
128.ಪುರದ ನಾಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
129.ಪ್ರಸಾದಿ ಭೋಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
130.ಪ್ರಸಾದಿ ಲೆಂಕ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ

131.ಬಹುರೂಪಿ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
132.ಬಳ್ಳೇಶ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
133.ಬಾಚಿ ಕಾಯಕದ ಬಸವಪ್ಪ ಶರಣರಿಗೆ ಶರಣು, ಶರಣು ಶರಣಾರ್ಥಿ
134.ಬಾಲಬೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
135.ವಚನಕಾರ ಬಾಲ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
136.ಬಾಹೂರ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
137.ಬಿಬ್ಬಿ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
138.ಬೊಕ್ಕಸದ ಚಿಕ್ಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
139.ಭರಿತಾರ್ಪಣದ ಚೆನ್ನಬಸವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
140.ಭಿಕಾರಿ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
141.ಕೆಂಭಾವಿ ಭೋಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
142.ಮನಸಂದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
143.ಮನುಮುನಿ ಗುಮ್ಮಟದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
144.ಕಂದಹಾರದ ಮರುಳು ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
145.ಮಲಹರ ಕಾಯಕದ ಚಿಕ್ಕದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
146.ಮಹಾದೇವೀರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
147.ಮಳುಬಾವಿಯ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
148.ಮಾದಾರ ಚೆನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
149.ಮರುಳು ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
150.ಚೋಳವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
151.ಗುರುಕುಲದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
152.ಮಾದಾರ ಧೂಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
153.ಮಾರುಡುಗೆಯ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
154.ಮಾರೇಶ್ವರೊಡೆಯ ಶರಣರಿಗೆ ಶರಣು, ಶರಣು ಶರಣಾರ್ಥಿ
155.ಮೆರೆ ಮಿಂಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
156.ಮೇದಾರ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
157.ಮೈದುನ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
158.ರಕ್ಕಸ ಬೊಮ್ಮ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
159.ರಾಯಸದ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
160.ರೇಚಡ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
161.ಲದ್ದೆಯ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
162.ವಚನ ಭಂಡಾರಿ ಶಾಂತರಸ ಶರಣರಿಗೆ ಶರಣು, ಶರಣು ಶರಣಾರ್ಥಿ
163.ವರದ ಸಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
164.ವೀರ ಗೊಲ್ಲಾಳ ಶರಣರಿಗೆ ಶರಣು, ಶರಣು ಶರಣಾರ್ಥಿ
165.ವೀರ ಶಂಕರದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
166.ವೇದಮೂರ್ತಿ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
167.ವೈದ್ಯ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ

168. ಶಂಕರ ದಾಸಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
169. ಕಂಬಳಿಯ ನಾಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
170. ಶಿವನಾಗಮಯ್ಯ ಶರಣರಿಗೆ ಶರಣರಿಗೆ ಶರಣು, ಶರಣು ಶರಣಾರ್ಥಿ
171. ಸಂಗಮೇಶ್ವರದ ಅಪ್ಪಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
172. ಸಕಲೇಶ ಮಾದರಸ ಶರಣರಿಗೆ ಶರಣು, ಶರಣು ಶರಣಾರ್ಥಿ
173. ಸಗರದ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
174. ಸತ್ತಿಗೆ ಕಾಯಕದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
175. ಸಿದ್ಧಾಂತಿ ವೀರ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
176. ಸಿಮ್ಮಲಿಗೆ ವೀರ ಚೆನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
177. ಸೋಮದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
178. ಸುಂಕದ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
179. ಸೂಜಿಕಾಯಕದ ರಾಮಿತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
180. ಸೊಡ್ಡಳ ಬಾಚರಸ ಶರಣರಿಗೆ ಶರಣು, ಶರಣು ಶರಣಾರ್ಥಿ
181. ಹಡಪದ ರೇಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
182. ಹಾವಿನ ಹಾಳ ಕಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
183. ಹುಂಜಿನ ಕಾಳಗದ ದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
184. ಹೆಂಡದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
185. ಹೊಡೆಹುಲ್ಲ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
186. ಅಗ್ಘವಣಿಯ ಹೊನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
187. ನಿಜ ವಿರಕ್ತ ನಿರ್ಲಜ್ಜ ಶಾಂತಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
188. ಸಗರದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
189. ನಿಗಮದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
190. ಕಲಕೇತ ಬ್ರಹ್ಮಗುರು ಶರಣರಿಗೆ ಶರಣು, ಶರಣು ಶರಣಾರ್ಥಿ
191. ಮೊರನ ವೇಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
192. ವಾರುಧಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
193. ವೀರಬಲ್ಲಾಳ ಶರಣರಿಗೆ ಶರಣು, ಶರಣು ಶರಣಾರ್ಥಿ
194. ನಿಜ ಲಿಂಗ ಚಿಕ್ಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
195. ಪಡಿಹಾರಿ ಉತ್ತಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
196. ಚಿಕ್ಕ ಮಾದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
197. ಮುಗ್ಧ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
198. ಸದ್ಯೋನ್ಮುಕತಿ ಶರಣ ಸತ್ಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
199. ಪುರದ ನಾಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
200. ರೇವಣಸಿದ್ಧರ ಸುಪುತ್ರ ರುದ್ರಮುನಿ ದೇವರಿಗೆ ಶರಣರಿಗೆ ಶರಣು, ಶರಣು ಶರಣಾರ್ಥಿ
201. ವೀರ ಶರಣ ಜಗದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
202. ಧೀರ ಶರಣ ಮಲ್ಲಿಬೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
203. ಹಿಪ್ಪರಿಗೆಯ ಶರಣ ಮಲ್ಲಿಕಾರ್ಜುನನಿಗೆ ಶರಣು, ಶರಣು ಶರಣಾರ್ಥಿ
204. ದಿಗಂಬರ ಮುಕ್ತಿ ಮುನಿ ಶರಣರಿಗೆ ಶರಣು, ಶರಣು ಶರಣಾರ್ಥಿ

205. ಸುಕುಮಾರ ಚೆನ್ನಬಸವೇಶ್ವರರಿಗೆ ಶರಣ, ಶರಣು ಶರಣಾರ್ಥಿ
206. ಶೂಲದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
207. ಹೊಡೆಹುಲ್ಲ ಬಂಕನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
208. ಇಂಡಿಯ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
209. ಗೊಬ್ಬೂರ ಬಿಬ್ಬಿ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
210. ಸೂಗರ ಚೆನ್ನವೀರೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
211. ಅಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
212. ಎಡೆ ಮಠದ ನಾಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
213. ಕುಂಬಾರ ಗುಂಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
214. ಲಕ್ಕದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
215. ಚಾಂಗುಬಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
216. ಶಿವಭಕ್ತ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
217. ಲೆಂಕ ಬೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
218. ಸಪ್ಪೆ ಯಲ್ಲಮ್ಮದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
219. ಹಾಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
220. ಭದ್ರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
221. ಒಕ್ಕಲಿಗ ಮಾರಗೌಡ ಶರಣರಿಗೆ ಶರಣು, ಶರಣು ಶರಣಾರ್ಥಿ
222. ಬಳ್ಳಿಗಾವಿಯ ಗೊಗ್ಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
223. ಮೊರಟದ ಬಂಕಯ್ಯ ಶರಣರಿಗೆ ಶರಣು ಶರಣು ಶರಣಾರ್ಥಿ
224. ರಾಗರಸಾಂಕ ಶರಣರಿಗೆ ಶರಣು, ಶರಣು ಶರಣಾರ್ಥಿ
225. ಶಿವರಾತ್ರಿ ಸಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
226. ಮುಸುಡಿಯ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
227. ಗರಡಿಯ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
228. ಪುಲಿಗೆರೆಯ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
229. ನಾಗನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
230. ಅಡಿಕೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
231. ಮಡಿಕೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
232. ಬ್ಯಾಳಿ ಬಸವೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
233. ಬಡಿಹೋರಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
234. ಶಿವಯೋಗಿ ಮಲ್ಲರಸ ಶರಣರಿಗೆ ಶರಣು, ಶರಣು ಶರಣಾರ್ಥಿ
235. ಜಂಬೂರು ಮಹಾಕಾಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
236. ಅಮೋಘದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
237. ಢಂಕಣ ಕೋಟೆಯ ನೂರೊಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
238. ಒಲೆಯ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
239. ತಾಳಿಕೋಟೆಯ ಶಿವದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
240. ಇಳಿಹಾಳ ಬೊಮ್ಮಯ ಶರಣರಿಗೆ ಶರಣು, ಶರಣು ಶರಣಾರ್ಥಿ
241. ವೀರ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
242. ತಂಗಟೂರು ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
243. ಗುಂಡ ಬ್ರಹ್ಮಯ ಶರಣರಿಗೆ ಶರಣು, ಶರಣು ಶರಣಾರ್ಥಿ
244. ರೇವಯ್ಯದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
245. ಸುರಗಿಯ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
246. ದಾಸೋಹ ರಾಯ ಶರಣರಿಗೆ ಶರಣು, ಶರಣು ಶರಣಾರ್ಥಿ
247. ವನಿಪುರದ ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
248. ವೆಲ್ಲಗೊಂಡದ ಮಹಾದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
249. ಪಡಿಹಾರಿ ಬಸವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
250. ರುದ್ರಪಶುಪತಿ ಶರಣರಿಗೆ ಶರಣು, ಶರಣು ಶರಣಾರ್ಥಿ
251. ವಿಜಯಪುರದ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
252. ಉರಗ ರಾಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
253. ಕನಕದ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
254. ಕಸ್ತೂರಿಯ ಸಾರಣೆಯ ಉದ್ಭಟಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
255. ಕಂಬಿಕಾರ ಹೊನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
256. ಕಾಖಂಡಕಿಯ ಶಿವಮುಗ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
257. ಕುರುಗೋಡದ ರಾಚಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
258. ಗಂಡುಗತ್ತಿಯ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
259. ಚಿಕ್ಕಣಾರಾಧ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
260. ಶ್ವೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
261. ಸಕಲ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
262. ಸನ್ಯಾಸಿ ಮಾಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
263. ಶಿರಿವಾರದ ಬಂಕಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
264. ಸಗರದ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
265. ಸಾತ್ವಿಕ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
266. ಸಾಹಿತ್ಯ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
267. ಸಿಂಗೀ ಬೊಪ್ಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
268. ಸಿಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
269. ಸಿದ್ಧ ಬುದ್ಧಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
270. ಸುಂಕದ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
271. ಸೆಬ್ಬಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
272. ಶೆಟ್ಟಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
273. ಶೆಟ್ಟಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
274. ಸೋಮರಾಜ ಶರಣರಿಗೆ ಶರಣು, ಶರಣು ಶರಣಾರ್ಥಿ
275. ಹಸಿಯ ಮಸಕದ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
276. ಹಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
277. ಹಟಕೇಶಿರ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
278. ಹೂವಿನ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

279. ಕ್ಷೇತ್ರನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
280. ಶಿವಕರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
281. ನಂದೀಶ ಶರಣರಿಗೆ ಶರಣು, ಶರಣು ಶರಣಾರ್ಥಿ
282. ನಂದೀಕೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
283. ತಂಡೇಶ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
284. ತಿಪ್ಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
285. ಚೆಟ್ಟಿಂಬಲೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
286. ತರನಳ್ಳಿ ಬಾಚರಸ ಶರಣರಿಗೆ ಶರಣು, ಶರಣು ಶರಣಾರ್ಥಿ
287. ದಾಸೋಹದ ಸಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
288. ಮಳೆಯ ರಾಜ ಶರಣರಿಗೆ ಶರಣು, ಶರಣು ಶರಣಾರ್ಥಿ
289. ಧನಸೇನ ಶೆಟ್ಟಿ ಶರಣರಿಗೆ ಶರಣು, ಶರಣು ಶರಣಾರ್ಥಿ
290. ಧೂಪದ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
291. ವೀರಭದ್ರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
292. ಪಡಿಹಾರಿ ಉತ್ತಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
293. ಪ್ರಸಾದದ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
294. ಬಾಗುಳಿಯ ಕೇಶವರಾಜ ಶರಣರಿಗೆ ಶರಣು, ಶರಣು ಶರಣಾರ್ಥಿ
295. ಬಾಣಸಿಗ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
296. ಬೆಡಗಿನ ಸುಂದರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
297. ಬಾಲ ಬೊಮ್ಮಯ್ಯ ಶರಣರಿಗೆ ಶರಣು ಶರಣು ಶರಣಾರ್ಥಿ
298. ಮಾದರ ದೊಡ್ಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
299. ಮೂರು ಜಾವದ ದೇವರು ಶರಣರಿಗೆ ಶರಣು, ಶರಣು ಶರಣಾರ್ಥಿ
300. ವಿರುಪಾಕ್ಷಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
301. ಕಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
302. ಶಿವಭದ್ರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
303. ಶಿವಯೋಗಿ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
304. ಶಿವರಾತ್ರಿ ಭದ್ರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
305. ಸಗರದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
306. ಸದ್ಯೋಜಾತ ಶರಣರಿಗೆ ಶರಣು, ಶರಣು ಶರಣಾರ್ಥಿ
307. ಸಾಂಕ್ಯನಾರು ಶರಣರಿಗೆ ಶರಣು, ಶರಣು ಶರಣಾರ್ಥಿ
308. ಸೌಂದರ್ಯ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
309. ಅಜ್ಜದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
310. ಅಣ್ಣಬೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
311. ಅಮಾತ್ಯ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
312. ಅಮೃತನಾಥಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
313. ಅವಗಡದ ಬಸವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
314. ಅಲಂಕಾರ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
315. ಅಂಗರಾಯ ಶರಣರಿಗೆ ಶರಣು, ಶರಣು ಶರಣಾರ್ಥಿ

316. ಆಚಾರ್ಯ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
317. ಶಿಗುರಿಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
318. ಸಿದ್ಧವೀರದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
319. ಪುಷ್ಪದ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
320. ಇಡುವನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
321. ಇಂಡೆ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
322. ಉಘೆಯ ನಾಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
323. ಏಕಾಂತದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
324. ಕಲ್ಲಿನಾಥ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
325. ಕಾಜೀ ರಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
326. ಕಾಲಾಗ್ನಿರುದ್ರ ಶರಣರಿಗೆ ಶರಣು, ಶರಣು ಶರಣಾರ್ಥಿ
327. ಕಾಳಿಮರಸ ಶರಣರಿಗೆ ಶರಣು, ಶರಣು ಶರಣಾರ್ಥಿ
328. ಕನ್ನದ ವೀರಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
329. ಕಿರಾತ ಶರಣರಿಗೆ ಶರಣು, ಶರಣು ಶರಣಾರ್ಥಿ
330. ಕುಪ್ಪಸದ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
331. ಕುರುಕಾಂಟ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
332. ಕೆರೆಯೂರ ದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
333. ಕೆಲವೂರು ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
334. ಕೊಟಕದ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
335. ಕೋಟಿ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
336. ಗಂಗ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
337. ಗಂಗಾಪುರದ ಬಸವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
338. ಗೋಣೆಯ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
339. ಗೊಲ್ಲ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
340. ಗೋಯಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
341. ಗೌರಾರ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
342. ಚಾರದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
343. ಚಾಳುಕ್ಯ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
344. ಚಿಕ್ಕಬಸವ ಶರಣರಿಗೆ ಶರಣು, ಶರಣು ಶರಣಾರ್ಥಿ
345. ಚಿಕ್ಕ ರಾಚಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
346. ಚಿಪ್ಪನೂರಪ್ಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
347. ಚಿಂಕರ ಮಾಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
348. ಚೇಟಲ ನೇಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
349. ಜಗದಾರಾಧ್ಯ ಕರಸ್ಥಲದ ನಾಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
350. ಜಟ್ಟಿ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
351. ಜತ್ತರಟದ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
352. ಜೋಹಿರ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

353. ಜೋದರ ಮಾಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
354. ದಶಗುಣ ಸಿಂಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
355. ದಂಡೀ ಪ್ರಸನ್ನ ಬಸವ ಶರಣರಿಗೆ ಶರಣು, ಶರಣು ಶರಣಾರ್ಥಿ
356. ದಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
357. ದಾಸ ಕೇಶಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
358. ದೇವರ ಪಂಡಿತ ಶರಣರಿಗೆ ಶರಣು, ಶರಣು ಶರಣಾರ್ಥಿ
359. ಮಾರಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
360. ದ್ರೋಹೇಶ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
361. ಧವಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
362. ಡವಳೇಶ್ವರ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
363. ದುರ್ಜಟ ಕೇಶ ಶರಣರಿಗೆ ಶರಣು, ಶರಣು ಶರಣಾರ್ಥಿ
364. ನಾಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
365. ನಾಳ್ಪೊತ್ತಿನ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
366. ನಿಜಭಾವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
367. ನಿತ್ಯ ನಿಯಮದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
368. ನಿರಂಜನದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
369. ನಿರಾಲಂಬದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
370. ನಿರಾಳದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
371. ನೆಲವಿಗೆ ಚೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
372. ನಿರ್ಧನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
373. ನಿರ್ಮಿಷ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
374. ನಿರ್ದತ್ತಿ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
375. ಪ್ರಸಾದಿ ದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
376. ಪರಮ ಹಂಸ ಶರಣರಿಗೆ ಶರಣು, ಶರಣು ಶರಣಾರ್ಥಿ
377. ವಲ್ಲಭ ರಾಜ ಶರಣರಿಗೆ ಶರಣು, ಶರಣು ಶರಣಾರ್ಥಿ
378. ಕಲ್ಲೇಶ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
379. ಪುಷ್ಪದ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
380. ಪರ್ವತನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
381. ಪಂಚಾಗ್ನಿ ಸೂರ್ಯ ಶರಣರಿಗೆ ಶರಣು, ಶರಣು ಶಥಣಾರ್ಥಿ
382. ಪಂಚಾಕ್ಷರಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
383. ಪಾಕದ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
384. ಪಾದಾಲಕೆ ಶರಣರಿಗೆ ಶರಣು, ಶರಣು ಶರಣಾರ್ಥಿ
385. ಪಾಂಡ್ಯನಾಯಕ ಶರಣರಿಗೆ ಶರಣು, ಶರಣು ಶರಣಾರ್ಥಿ
386. ಪೋತಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
387. ಪೇದಿಗೆ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
388. ಪೊನ್ನ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
389. ಪರಾರೆ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

390. ಬಡಿವರ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
391. ಬಲಗರ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
392. ಬಸವರಾಜಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
393. ಬಿಸಿನೆಲೇಸದ ದೇವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
394. ಬಾಚರಾಜ ಶರಣರಿಗೆ ಶರಣು, ಶರಣು ಶರಣಾರ್ಥಿ
395. ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
396. ಬಿಜ್ಜಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
397. ಬೀರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
398. ಬುಡ್ಡ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
399. ಬೆಟ್ಟದ ದೇವರಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
400. ಬೈತಲೆಯ ಮಾರಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
401. ಬೊಮ್ಮಿ ಶೆಟ್ಟಿ ಶರಣರಿಗೆ ಶರಣು, ಶರಣು ಶರಣಾರ್ಥಿ
402. ಬಾಸರ ದೇವಯ್ಯ ಶರಣರಿಗೆ ಶರಣು,ಶರಣು ಶರಣಾರ್ಥಿ
403. ಮಹಾ ಕಾಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
404. ಮಹಾಬಲದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
405. ಮಾದಿರಾಜಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
406. ಮಾಯಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
407. ಮಿಂಡ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
408. ಮುದ್ದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
409. ಮುಷ್ಕಿ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
410. ಮುಂಡ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
411. ಮೂಗ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
412. ಮೂಲ ಪ್ರಣಮಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
413. ಮೇಧಾವಿ ಉದ್ರುಕ್ತ ಶರಣರಿಗೆ ಶರಣು, ಶರಣು ಶರಣಾರ್ಥಿ
414. ಮೇಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
415. ಮೋಳಿಗೆಯ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
416. ಮೌಕ್ತಿಕ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
417. ರತ್ನದ ರಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
418. ರಾಚಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
419. ರಾಚಾರ್ದ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
420. ರಾಮದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
421. ರಾಮೇಸಹಣೆ ಶರಣರಿಗೆ ಶರಣು, ಶರಣು ಶರಣಾರ್ಥಿ
422. ರುದ್ರಿಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
423. ಲಿಂಗ ಸತ್ಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
424. ಲೆಂಕ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
425. ವತ್ತೇಶ ಸೋಮಯ್ಯ ಶಥಣರಿಗೆ ಶರಣು, ಶರಣು ಶರಣಾರ್ಥಿ
426. ವರಗೊಂಡ ಚಕ್ರವರ್ತಿ ಶರಣರಿಗೆ ಶರಣು, ಶರಣು ಶರಣಾರ್ಥಿ

427. ವೀರ ಕಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
428. ವೀರ ಕೇದಾರ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
429. ವೀರ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
430. ವೀರಚಾಕಿ ರಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
431. ವೀರನಾಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
432. ವೀರ ಶಿವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
433. ವಿರೂಪ ಕಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
434. ವೀರ ಘಂಟಿ ಶರಣರಿಗೆ ಶರಣು, ಶರಣು ಶರಣಾರ್ಥಿ
435. ವೀರ ಬಲ್ಲಾಳ ಶರಣರಿಗೆ ಶರಣು, ಶರಣು ಶರಣಾರ್ಥಿ
436. ವೀರ ಪೊಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
437. ವೆಡ್ಡ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
438. ವೇರಲದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
439. ಮೇಗಿ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
440. ಶೇಖರ ಶೆಟ್ಟಿ ಶರಣರಿಗೆ ಶರಣು, ಶರಣು ಶರಣಾರ್ಥಿ
441. ಶಂಕರ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
442. ಶಾಂತರಾಮ ಶರಣರಿಗೆ ಶರಣು, ಶರಣು ಶರಣಾರ್ಥಿ
443. ಶಾರ್ದೂಲ ಶರಣರಿಗೆ ಶರಣು, ಶರಣು ಶರಣಾರ್ಥಿ
444. ಶಿಖರೇಶ್ವರ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
445. ಶಿವಕುಮಾರ ಶರಣರಿಗೆ ಶರಣು, ಶರಣು ಶರಣಾರ್ಥಿ
446. ಶಿವದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
447. ಶಿವಪೂಜೆಯ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
448. ಶಿವ ಮುದ್ರೆಯ ಶರಣರಿಗೆ ಶರಣು, ಶರಣು ಶರಣಾರ್ಥಿ
449. ಶಿವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
450. ಶಿವರಾತ್ರಿ ಅಪ್ಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
451. ಅಕ್ಕನಾಗಲಾಂಬಿಕಾ ಪತಿ ಶಿವದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
452. ಕೇಶ ರಾಜಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
453. ಕನ್ನದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
454. ಉತ್ತಮಾಂಗದ ಕೇಶ ಹೊನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
455. ಸದರದ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
456. ಕದಿರೆ ರೇವಯ್ಯ ಶರಣರಿಗೆ ಶರಣು,-ಶರಣು ಶರಣಾರ್ಥಿ
457. ವೀರ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
458. ಉರುಗದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
459. ಸೊಡ್ಡಲ ಮಲ್ಲಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
460. ನಿಜ ಭಾನು ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
461. ನಿತ್ಯ ನೇಮದ ಮೈಲಿ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
462. ದೇವರ ದಾಸಿ ಶರಣರಿಗೆ ಶರಣು, ಶರಣು ಶರಣಾರ್ಥಿ
463. ಸೋಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

464. ಗೌಳ ಬಟ್ಟಾರಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
465. ಪಿಟ್ಟವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
466. ಗೋವಿಂದ ಬಟ್ಟಾರಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
467. ಶ್ವಪಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
468. ಸಾಮವೇದಿ ಶರಣರಿಗೆ ಶರಣು, ಶರಣು ಶರಣಾರ್ಥಿ
469. ಅಮುಗಿ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
470. ಕಲಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
471. ಮಾರಗೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
472. ಮಲೆಯ ರಾಜಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
473. ಮಲೆಯ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
474. ಬಿಲ್ಲ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
475. ವೇಮನಾರಾಧ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
476. ಚಿಕ್ಕ ಸೋಮದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
477. ನರಪಲಿ ಕಾಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
478. ಕೆಂಭಾವಿ ಭೋಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
479. ವೀರಚಾಕಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
480. ಮಾಟ ಕೂಟದ ಮಲ್ಲಿನಾಥಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
481. ಅಪ್ಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
482. ನೀಡುವನಾಥ ತಿಪ್ಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
483. ಮಲ್ಲಿನಾಥಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
484. ಗೊಗ್ಗ ದೊರೆ ಕೇಲಕ್ಕರಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
485. ಚಾಕಲದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
486. ಉದ್ಭಟ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
487. ರೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
488. ಜೂಟೂರ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
489. ವೀರ ಮಾಚಯ್ಯ ಶರಣರಿಗೆ ಶರಣು; ಶರಣು ಶರಣಾರ್ಥಿ
490. ಸಾಂಖ್ಯ ದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
491. ಹೊಟ್ಟಲ ಕೆರೆಯ ವೀರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
492. ನಾಮಾಕ್ಯದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
493. ಬಿಲದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
494. ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
495. ವೀರ ಸಂಗವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
496. ವೀರ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
497. ಭಾನುದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
498. ಕೋಹರ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
499. ಕಾಮಲ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
500. ಸಾನೆಯ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

501. ರಾಜನ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
502. ಕಪಿಲೆಯ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
503. ಏಕ್ಕೀರ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
504. ಖಡ್ಗದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
505. ಮಿಂಡ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
506. ಸಾಹಿತ್ಯ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
507. ಚಿಮ್ಮಲಿಗೆಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
508. ಮೇಘಾವಿ ರುದ್ರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
509. ಹೆರೂರ ಹೆಣ್ಣು ಶರಣೆಗೆ ಶರಣು, ಶರಣು ಶರಣಾರ್ಥಿ
510. ವಹಿಲದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
511. ಬೊಪ್ಪಲದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
512. ಪಲ್ಲಮ ರಾಯ ಶರಣರಿಗೆ ಶರಣು, ಶರಣು ಶರಣಾರ್ಥಿ
513. ಗೊಲ್ಲಾಳ ರಾಯನು ಶರಣರಿಗೆ ಶರಣು, ಶರಣು ಶರಣಾರ್ಥಿ
514. ಇಳಿಹಾಳ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
515. ರಾಮಲಿಂಗೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
516. ಪಾದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
517. ಬಾದರಾಯಕ್ಕ ಶರಣೆಗೆ ಶರಣು, ಶರಣು ಶರಣಾರ್ಥಿ
518. ಬೋದ ರಾಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
519. ಶೂಲಾಯುಧಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
520. ಅರಿಯಮ ರಾಜಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
521. ಹಂಪೆ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
522. ವೆಂಗಿ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
523. ವೀರಬೊಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
524. ಪ್ರಸಾದಿ ಬಂಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
525. ಏಲೇಶ್ವ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
526. ಜಾಳೊಕ್ಯದ ಭೋಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
527. ಚೆಟ್ಟಿಗ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
528. ಗುರು ಭಕ್ತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
529. ದರೀಪುರದ ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
530. ನಿಂಗುಳಿಗೆ ವೈಜಕ್ಕವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
531. ಶಿವ ಮುದ್ದ ದೇವರು ಶರಣರಿಗೆ ಶರಣು, ಶರಣು ಶರಣಾರ್ಥಿ
532. ಭಂಡಾರ ಬಸವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
533. ಕಾಳ್ಬೊರತೆಯ ಬಲಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
534. ಶ್ರೀಕೋಟಿ ಪಿಳ್ಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
535. ಸರವೂರ ಬಂಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
536. ಬೆರಳಿನ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
537. ಆತ್ಮದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

538. ಕೊಲ್ಲಿಪಾಕಿ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
539. ಗೋವಿನ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
540. ಗಣೇಶ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
541. ವೀರ ಗುಂಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
542. ಮಾರಗೋವಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
543. ನೆಲವಿಗೆ ಶಾಂತಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
544. ಅಜ್ಜದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
545. ಅನುಮಿಷಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
546. ಸಕಳೇಶ ಗೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
547. ವರ್ತೆ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
548. ಧವಳಿ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
549. ಬೊಂತಲಾದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
550. ಧವಳೇಶ ಶರಣರಿಗೆ ಶರಣು, ಶರಣು ಶರಣಾರ್ಥಿ
551. ಕಂಗಳ ಬಸವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
552. ಜಂತರಾವದ ಬಸವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
553. ಶ್ರೀ ಗುರು ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
554. ಸೂರಸಾನಿ ಶರಣರಿಗೆ ಶರಣು, ಶರಣು ಶರಣಾರ್ಥಿ
555. ಧೂಳೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
556. ಮರುಳ ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
557. ಕೈ ಕೂಲಿಯ ಚಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
558. ಕಲ್ಲುಗೆಲಸದ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
559. ಸೂಳೆ ನಂಬಿಯಕ್ಕ ಶರಣೆಗೆ ಶರಣು, ಶರಣು ಶರಣಾರ್ಥಿ
560. ಸೂಳೆ ಬೊಮ್ಮಕ್ಕ ಶರಣೆಗೆ ಶರಣು, ಶರಣು ಶರಣಾರ್ಥಿ
561. ಸೂಳೆ ಚಾಕಲದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
562. ಸೂಳೆ ಪದ್ಮಲಾದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
563. ಸೂಳೆ ಬೊಪಲದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
564. ಚಂದದ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
565. ಗುಗ್ಗುಳದ ಧವಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
566. ಪರಾಕಿ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
567. ಹಣತೆ ಲಕ್ಕರಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
568. ಕೊಳಲಿನ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
569. ಮನ್ನಣಿಗೆ ಮಾಹಾದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
570. ಕಂಬಿಯ ರೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
571. ಎಡೆಮಠದ ನಾಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
572. ಕಂಥೆ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
573. ಲದ್ದೆ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
574. ಮೊಗವಾಡದ ಮಹದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

575. ಯೋಗಿ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
576. ಗಿರುಗಟೀಶ್ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
577. ಹೂಲಿ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
578. ಹೂಲಿ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
579. ಸತ್ಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
580. ಹಾದರದ ಬೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
581. ಬಿಲ್ಲಮರಾಯ ಶರಣರಿಗೆ ಶರಣು, ಶರಣು ಶರಣಾರ್ಥಿ
582. ಬೋಗಿ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
583. ಕೊಡದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
584. ಮೌನದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
585. ಕೋರಿ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
586. ಕೊಂಡೆಯ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
587. ಕೊಂಡಗುಳಿ ಕೇಶರಾಜ ಶರಣರಿಗೆ ಶರಣು, ಶರಣು ಶರಣಾರ್ಥಿ
588. ಚೆನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
589. ಸತ್ತಿಗೆ ಪಟ್ಟಪ್ಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
590. ಕುಮಾರ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
591. ಸಾರಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
592. ನೀಲಲೋಚನೆಯಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
593. ಗುರು ಭಕ್ತಿ ಲಿಂಗಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
594. ಚಂದ್ರ ಮಹಾದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
595. ಮಲುಹಣ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
596. ಮಲುಹಣಿ ಶರಣೆಗೆ ಶರಣು, ಶರಣು ಶರಣಾರ್ಥಿ
597. ನಿಜಗುಣದೇವರು ಶರಣರಿಗೆ ಶರಣು, ಶರಣು ಶರಣಾರ್ಥಿ
598. ಹೂವಿನ ಮಾಚಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
599. ಮಲ್ಲಿಕಾರ್ಜುನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
600. ಹೆರೂರು ನಾಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
601. ಸಗರದ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
602. ಎರದಲೆಯಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
603. ಮುದನೂರು ದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
604. ವೈಜಕ್ಕವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
605. ಬಲ್ಲವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
606. ಅಮ್ಮವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
607. ಆದವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
608. ಅರಸವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
609. ವೀರ ರೆಮ್ಮವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
610. ನಿಂಬವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
611. ಹೊನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
612. ಹಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
613. ಬೀರದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
614. ಬಿಜ್ಜಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
615. ಕಂಡುಲಿಗೆ ನಾಗಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
616. ನಾಗಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
617. ಚಕ್ಕುಲಿಗೆ ನಾಗಿದೇವಯ್ಯಶರಣರಿಗೆ ಶರಣು, ಶರಣು ಶರಣಾರ್ಥಿ
618. ಸೇನಾಥದೇವರ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
619. ಹೂವಿನ ಬಾಚಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
620. ಬಾಚಲಾದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
621. ಸಿಂಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
622. ಸಾತ್ವಿಕ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
623. ಮೊಳಿಗೆ ನಿಜ ಸಂಗವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
624. ದೇವರಸ ಶರಣರಿಗೆ ಶರಣು, ಶರಣು ಶರಣಾರ್ಥಿ
625. ಕನ್ನಮ್ಮರಸಿ ಶರಣೆಗೆ ಶರಣು, ಶರಣು ಶರಣಾರ್ಥಿ
626. ದೇವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
627. ಸಕಲ ಆದಿ ಪ್ರಮಥ ಗಣಂಗಳಿಗೆ ಶರಣು, ಶರಣು ಶರಣಾರ್ಥಿ

ಜಯ ಬಸವರಾಜ ಭಕ್ತ ಜನ ಸುರಭೂಜಾ
ಜಯತು ಮಹಕಾರಣಿಕ ಲಿಂಗದೇವನ ಘನತೇಜ
ಜಯತು ಕರುಣಾಸಿಂಧು ಭಜಕ ಜನ ಬಂಧು
ಜಯ ಇಷ್ಟದಾಯಕ ರಕ್ಷಿಸು ಶ್ರೀಗುರು ಬಸವಾ ॥
ರಕ್ಷಿಸು ಶ್ರೀ ಗುರು ಬಸವಾ ॥

ಸ್ವಯಂ ಸೇವಕರಿಗೆ ಕರೆ

ತನು ಮನ ಧನಗಳಿಂದ ಸೇವೆ ಮಾಡಿ ಧರ್ಮವನ್ನು ಸಂರಕ್ಷಿಸುವುದು ಎಲ್ಲರ ಕರ್ತವ್ಯವಾಗಿದೆ. ಶರಣ ಮೇಳ/ ಕಲ್ಯಾಣ ಪರ್ವಗಳ ಯಶಸ್ಸು ನಿಂತಿರುವುದೇ ನಿಷ್ಠಾವಂತ ಶರಣರ ಪರಿಶ್ರಮದ ಮೇಲೆ. ಬೇಸಿಗೆ ರಜ ಇರುತ್ತದೆ. ವಿದ್ಯಾರ್ಥಿಗಳಿಗೆ ಪರೀಕ್ಷೆ ಮುಗಿದಿರುತ್ತದೆ. ಆದ್ದರಿಂದ ಕಲ್ಯಾಣ ಪರ್ವಕ್ಕೆ 10-15 ದಿವಸ ಮೊದಲೇ ಕಾರ್ಯಕರ್ತ ಶರಣ-ಶರಣೆಯರು ಬಸವ ಕಲ್ಯಾಣಕ್ಕೆ ಆಗಮಿಸಿ ಸೇವಾ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕೆಂದು ಸೂಚಿಸುತ್ತೇವೆ. ಮುಖ್ಯವಾಗಿ ಬೀದರ್, ಗುಲಬರ್ಗಾ ಜಿಲ್ಲೆಯ ಶರಣರು, ಮಹಾರಾಷ್ಟ್ರ ಆಂಧ್ರದ ಗಡಿ ಭಾಗದಲ್ಲಿರುವ ಕಾರ್ಯಕರ್ತರು ಬೇಗನೆ ಬರಬೇಕು.

- ಕಲ್ಯಾಣ ಪರ್ವ ಉತ್ಸವ ಸಮಿತಿ, ಬಸವ ಕಲ್ಯಾಣ

ಸಮಸ್ಯೆ..? - ಸಮಾಧಾನ..!

☐ ವೀರಣ್ಣ .ಎಂ.ಸಜ್ಜನ್, ಫರಹತಾಬಾದ್

? ಶರಣ ಮೇಳದಲ್ಲಿ ಬಿಡುಗಡೆ ಮಾಡಿದ ಭಿತ್ತಿ ದಿನದರ್ಶಿಯನ್ನು ನನ್ನ ಶಾಲೆಯ ಕಾರ್ಯಾಲಯದ ಮುಖ್ಯ ಸ್ಥಾನದಲ್ಲಿ ಎಲ್ಲರಿಗೂ ಕಾಣುವಂತೆ ಹಾಕಿದ್ದೇನೆ. ಕೆಲವು ಸಹೋದ್ಯೋಗಿಗಳು ಹೀಗೆ ಚರ್ಚಿಸಿದ್ದಾರೆ.

ಪ್ರ.1. ಬಸವಣ್ಣನವರ ಭಾವಚಿತ್ರವನ್ನು ಸರಕಾರಿ ಕಾರ್ಯಾಲಯಗಳಲ್ಲಿ ಹಾಕಬಾರದು. ಮಹಾತ್ಮ ಗಾಂಧೀಜಿ, ಅಂಬೇಡ್ಕರ ಅವರ ಭಾವಚಿತ್ರ ಮಾತ್ರ ಹಾಕಬೇಕು.

★ ಈ ಆಕ್ಷೇಪ ಎತ್ತಿದವರ ಬಗ್ಗೆ ಮೊದಲು ಚಿಂತಿಸಬೇಕು. ಇವರು ಲಿಂಗಾಯತರೇ ಆಗಿದ್ದರೆ ಕ್ರಾಂತಿ ಪುರುಷ ಬಸವಣ್ಣನವರ ಬಗ್ಗೆ ಏನೇನೂ ಅರಿಯದ ಅಜ್ಞಾನಿಗಳು. ಲಿಂಗಾಯತರೇ-ತರರಾಗಿದ್ದರೆ ಇಂದಿನ ವಿಕೃತಗೊಂಡ ಲಿಂಗಾಯತ ಸಮಾಜ ನೋಡಿ ಅದಕ್ಕೂ ಬಸವಣ್ಣನವರ ತತ್ವಕ್ಕೂ ಸಂಬಂಧ ಕಲ್ಪಿಸಿಕೊಂಡು, ಪೂರ್ವಾಗ್ರಹ ಪೀಡಿತರಾಗಿ ಇರುವವರೇ ಸರಿ. ಮಹಾತ್ಮ ಗಾಂಧೀಜಿ ಮತ್ತು ಡಾ|| ಅಂಬೇಡ್ಕರರಿಗಿಂತಲೂ ಬಸವಣ್ಣನವರು ಹೆಚ್ಚಿನ ಕ್ರಾಂತಿಕಾರಿಗಳು. ಮಹಾತ್ಮ ಗಾಂಧೀಜಿಯವರ ಸುಧಾರಣೆ ಕೆಲವು ರಂಗಗಳಿಗೆ ಸೀಮಿತ, ಬಸವಣ್ಣನವರದು ಬಹುಮುಖಿ, ಸರ್ವತೋಮುಖಿ. ಗಾಂಧೀಜಿ ಅಸ್ಪೃಶ್ಯರಿಗೆ ಹರಿಜನ ಎಂದು ನಾಮಾಂತರ ಮಾಡಿದರು. ಆದರೆ ವಿಶ್ವಗುರು ಬಸವಣ್ಣನವರು ಕೇವಲ ನಾಮಾಂತರ ಮಾಡದೆ ಅವರನ್ನು ಶರಣರನ್ನಾಗಿ ದೈವೀಕರಿಸಿದರು. ಡಾ|| ಅಂಬೇಡ್ಕರರು ಸಂವಿಧಾನ ಶಿಲ್ಪಿ. ಅವರ ಆಲೋಚನೆಗಳಿಗೆ ಸರ್ಕಾರದ ಬೆಂಬಲವಿತ್ತು. ಆದರೆ ಗುರು ಬಸವಣ್ಣನವರು ರಾಜನನ್ನು, ಪುರೋಹಿತ ಶಾಹಿಯನ್ನು, ವ್ಯವಸ್ಥೆಯನ್ನು ಎದುರು ಹಾಕಿಕೊಂಡು ಕಾರ್ಯ ಮಾಡಬೇಕಾಗಿತ್ತು. ಇವರುಗಳು 20ನೆಯ ಶತಮಾನದ ಸುಧಾರಕರು. ಇವರಿಗಿಂತಲೂ ಕಠಿಣವಾದ ಸುಧಾರಣೆಯನ್ನು 12ನೆಯ ಶತಮಾನದಲ್ಲೇ ಗುರು ಬಸವಣ್ಣನವರು ತಂದರು.

ಮಹಾರಾಷ್ಟ್ರ ಸರ್ಕಾರ ಇದನ್ನು ಮನಗಂಡು ಸರ್ಕಾರಿ ಕಾರ್ಯಾಲಯಗಳಲ್ಲಿ ಬಸವಣ್ಣನವರ ಭಾವ ಚಿತ್ರ ಹಾಕಲು, ಬಸವ ಜಯಂತಿ ಮಾಡಲು ವ್ಯವಸ್ಥೆ ಮಾಡಿದೆ.

ಪ್ರ.2. ಬಸವಣ್ಣನವರಿಗೆ ಪಂಚಮಸಾಲಿಯವರೇ ದೀಕ್ಷೆ ನೀಡಿದ್ದಾರಂತೆ !

★ ಬಹಳ ಅಜ್ಞಾನಿಗಳಿರುವವರ ಮಾತಿಗೆ ಪ್ರತಿಕ್ರಿಯೆ ತೋರಲೇಬಾರದು. ಏನು ಮಾಡುವುದು? ನೀವು ಕೇಳಿದ್ದಕ್ಕೆ ಹೇಳಬೇಕಾಗಿದೆ. ಇಂದಿರಾಜಿ ಅವರ ಕೊರಳಲ್ಲಿ ರುದ್ರಾಕ್ಷಿ ಮಾಲೆ ಇತ್ತು. ಅನೇಕ ಸ್ವಾಮಿಗಳು "ನಾವೇ ಅದನ್ನು ಆಶೀರ್ವದಿಸಿ ಕೊಟ್ಟದ್ದು. ಎಂದು ಕೊಚ್ಚಿಕೊಳ್ಳುತ್ತಾರೆ ಆದರೆ ಅವರೇನೂ ಇವರನ್ನು ಗುರು ಎನ್ನಲಿಲ್ಲವಲ್ಲ. ಒಮ್ಮೆ ಓರ್ವ ಸ್ವಾಮಿಗಳು ರಾಜಕುಮಾರ್ ಅವರ ಮಠಕ್ಕೆ ಬಂದಿದ್ದರೆಂತಲೂ ಆಗ ಲಿಂಗದೀಕ್ಷೆ ಮಾಡಿದುದಾಗಿಯೂ ಹೇಳಿದರು. ದೀಕ್ಷೆಯಾದುದಕ್ಕೆ ಏನು ಚಿಹ್ನೆ? ಅಂಗದ ಮೇಲೆ ಇಷ್ಟಲಿಂಗ ಇರುವುದು; ಅದು ಇರಲಿಲ್ಲ. ಅಂದಾಗ ಇವರ ದೀಕ್ಷೆಯ ಸುದ್ದಿ ಸುಳ್ಳು ಎನ್ನಬೇಕಾಗುವುದಲ್ಲವೆ? ಯಾರಾದರೂ ದೊಡ್ಡವರಾದರೆ ಅವರು ತಮಗೆ ಬಹಳ ನಿಕಟವರ್ತಿಗಳು ಎಂದುಕೊಳ್ಳಲು ಅನೇಕರು ಚಟಪಡಿಸುವಂತೆ ಗುರು ಬಸವಣ್ಣನವರಿಗೆ ದೀಕ್ಷೆ ಕೊಡಲು ಎಲ್ಲರೂ ಕಥೆ ಕಟ್ಟುತ್ತಾರೆ. ಆಶ್ಚರ್ಯವೆಂದರೆ ಗುರು ಬಸವಣ್ಣನವರಿಗೆ ಯಾವ ವ್ಯಕ್ತಿಯಿಂದಲೂ ದೀಕ್ಷೆಯಾಗಿಲ್ಲ. ದೇವರೇ ಅವರ ಜ್ಞಾನ ಗುರು. ಅವರು ಕೊಟ್ಟ ಲಿಂಗಾಯತ ಧರ್ಮದೊಳಕ್ಕೆ ಎಲ್ಲ ಜಾತಿ ಪಂಗಡ ವೃತ್ತಿಯವರು ಬಂದು ಸೇರಿದ್ದಾರೆ.

ಪ್ರ.3. ಪಂಚಮ ಸಾಲಿಯವರೇ ನಿಜವಾದ ಲಿಂಗಾಯತರಂತೆ ಅಹುದೆ?

★ ಗುರು ಬಸವಣ್ಣನವರ ಪಥದಲ್ಲಿ ನಡೆಯುವವರೇ ನಿಜ ಲಿಂಗಾಯತರು. ಹುಟ್ಟು, ಉದ್ಯೋಗ, ಅಂತಸ್ತು ಮುಖ್ಯವಲ್ಲ ಗುಣ, ಆಚರಣೆ ಮುಖ್ಯ.

ಪ್ರ.4. ಸರ್ಕಾರಿ ಶಾಲೆಯ ಕಾರ್ಯಾಲಯದಲ್ಲಿ ಬಸವಣ್ಣನವರ ಭಾವಚಿತ್ರ ಏಕೆ ಹಾಕಿದ್ದೀರಿ ಎಂದು ಮೇಲಧಿಕಾರಿಗಳು ಕೇಳಿದರೆ ಹಾಕಿದವರು ಏನು ಉತ್ತರ ಕೊಡುತ್ತಾರೆ?

★ ಉತ್ತರ ಕೊಡಲು ವಿಪುಲ ಸಾಮಗ್ರಿ ಇದೆ. 1. ಜಗತ್ತಿನ ಪ್ರಥಮ ಸಮಾಜವಾದಿ, 2. ಭಾರತದ ಮೊಟ್ಟ ಮೊದಲ ಸಮತಾವಾದಿ, 3. ಶ್ರೇಷ್ಠ ಸಮಾಜ ಸುಧಾರಕ, 4. ಸ್ತ್ರೀ ಸಮಾನತಾವಾದಿ, 5. ದೀನ ದಲಿತೋದ್ಧಾರಕ, ಪತಿತೋದ್ಧಾರಕ, 6. ಮೂಢ ನಂಬಿಕೆಯ ವಿರೋಧಿ ಇತ್ಯಾದಿ ಇತ್ಯಾದಿ.... ಗುರು ಬಸವಣ್ಣನವರನ್ನು ಸರಿಯಾಗಿ ಅರಿತಾಗ ಮಾತ್ರ ಅಜ್ಞಾನ ತೊಲಗಿ, ಅಭಿಮಾನ ಹುಟ್ಟಲು ಸಾಧ್ಯ! ಮತ್ತು ಇನ್ನಿತರರಿಗೆ ಮನವರಿಕೆ ಮಾಡಿಕೊಡಲು ಸಾಧ್ಯ!

☐ ಪರಪ್ಪ ಗೌಡ ಚಂದರಗಿ, ಗುಲಬರ್ಗಾ

? ರಾಷ್ಟ್ರೀಯ ಬಸವ ದಳಗಳ ಬಸವ ಮಂಟಪಗಳು ಈಗ ಅನೇಕರ ಗಮನ ಸೆಳೆಯುತ್ತಿವೆ. ಸುಂದರವಾದ ಅಚ್ಚುಕಟ್ಟಾದ ಕಟ್ಟಡಗಳು ಮತ್ತು ಉತ್ತಮ ನಿರ್ವಹಣೆ ಇಲ್ಲಿದೆ ಎಂದು ಅನೇಕರು ತಮ್ಮ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಲು ಬಯಸುತ್ತಾರೆ. ಬಾಡಿಗೆ ತೆಗೆದುಕೊಂಡು ಕೊಡಬಹುದೆ?

★ ಕಾರ್ಯಕ್ರಮಗಳ ವಿವರ ಮೊದಲು ಪಡೆಯಿರಿ. ಕೆಲವರು ಬಸವ ತತ್ವದ ಪ್ರಕಾರ ಸರಳ ವಿವಾಹಕ್ಕೆ ಕೇಳುವರು. ನಾಮಕರಣ, ಹುಟ್ಟುಹಬ್ಬ ಯಾವುದೇ ಆಚರಿಸಿದರೂ ಅವರು ಬಸವ ತತ್ವದ ರೀತಿಯಲ್ಲಿ ನಡೆಯಬೇಕು. ದೇವ(ಭಾನು)ವಾರದ ಪ್ರಾರ್ಥನೆ ತಪ್ಪಿಸಿ ಬಾಡಿಗೆ ಆಸೆಗೆ ಕೊಡಬಾರದು. ಒಂದು ವೇಳೆ ಪ್ರಾರ್ಥನೆಗೆ ಸೂಕ್ತವಾದ ಸ್ಥಳ ಇದ್ದರೆ ಕೊಡಬಹುದು. ಮತ್ತೆ ಕೆಲವರು ತಮ್ಮ ಮದುವೆಯಲ್ಲಿ ಪ್ರಾರ್ಥನೆ ನಡೆಯಬೇಕು, ರಾ.ಬ.ದಳದ ಶರಣರಿಗೆ ಪ್ರಸಾದ ಮಾಡಿಸಬೇಕು ಎಂಬ ಉದ್ದೇಶದಿಂದಲೇ ದೇವವಾರವನ್ನು ಮದುವೆಗೆ ಆಯ್ಕೆ ಮಾಡಿಕೊಳ್ಳುತ್ತಾರೆ. ಅಂಥವರಿಗೆ ಕೊಡಬೇಕು ಮತ್ತು ಎಲ್ಲರೂ ಭಾಗಿಗಳಾಗಬೇಕು.

ಇನ್ನು ಕೆಲವು ಪಂಥಗಳವರು ತಮ್ಮ ತರಬೇತಿ ಶಿಬಿರಗಳಿಗಾಗಿ ಕೇಳುತ್ತಾರೆ. ಉದಾ: ಬ್ರಹ್ಮಕುಮಾರಿ, ಎಸ್.ಎಸ್.ವೈ ಇತ್ಯಾದಿ. ಇವರುಗಳು ಮೊದಲು ಜನರಲ್ ಆಗಿ ವಚನಗಳನ್ನು ಉದಾಹರಿಸಿ ಲಿಂಗಾಯತರನ್ನು ಆಕರ್ಷಿಸಿ (ಏಕೆಂದರೆ ನಾಲ್ಕು ವಚನಗಳನ್ನು ಹೇಳಿದರೆ ಸಾಕು; ಇವರು ನಮ್ಮದನ್ನೇ ಹೇಳುತ್ತಾರೆ ಎಂದು ತಲೆದೂಗುತ್ತಾರೆ.) ನಂತರ ಅವರ ಪ್ರಭಾವ ವಲಯಕ್ಕೆ ತೆಗೆದುಕೊಂಡು ಇಷ್ಟಲಿಂಗ ನಿಷ್ಠೆ, ವಿಭೂತಿ ರುದ್ರಾಕ್ಷಿ ಧಾರಣೆ ಎಲ್ಲ ಬಿಡಿಸುತ್ತಾರೆ. ಕುರುಬ ಕುರಿಗಳನ್ನು ಕಾಯುವಂತೆ ಅನ್ಯ ಮಾರ್ಗಗಳಿಗೆ ಧಾವಿಸಲು ತುದಿಗಾಲ ಮೇಲೆ ನಿಂತಿರುವ ಲಿಂಗಾಯತರನ್ನು ತಮ್ಮ ಧಾರ್ಮಿಕ ಸಂಸ್ಕೃತಿ ಬಿಟ್ಟು ಹೋಗದಂತೆ ರಕ್ಷಿಸುವುದು ರಾಷ್ಟ್ರೀಯ ಬಸವ ದಳದ ಕರ್ತವ್ಯ. "ಶರಣರು ಕಂಡ ಶಿವ" ಎಂದು ಬ್ಯಾನರ್ ಹಾಕಿ ಬ್ರಹ್ಮಕುಮಾರ ಪ್ರಮುಖರು ಭಾಷಣ ಮಾಡುತ್ತಾರೆ. ಹಾಗಿದ್ದರೆ ಇವರೇಕೆ ಇಷ್ಟಲಿಂಗ ಧರಿಸುವುದಿಲ್ಲ ? ಶರಣರು ಇಷ್ಟಲಿಂಗ ಬೇಡವಾಗಿರುವಾಗ ಬ್ರಹ್ಮಕುಮಾರ, ಬ್ರಹ್ಮ ಕುಮಾರಿಯರು ಅವರ ಬಾಬಾ ವಿವರಿಸುವ ತತ್ವಗಳ ಬಗ್ಗೆ ಪ್ರವಚನ ಮಾಡಬೇಕೇ ವಿನಾ ಶರಣರ ಸಂದೇಶದ ಗೊಡವೆ ಇವರಿಗೇಕೆ ? ಇಂಥ ಆತ್ಮವಂಚನೆ ಸರಿಯಲ್ಲ.

☐ ಓರ್ವ ಕಾರ್ಯಕರ್ತ, ರಾ.ಬ.ದಳ, ಊರು ಬೇಡ

? ನಾನೊಬ್ಬ ರಾ.ಬ.ದಳದ ಕಾರ್ಯಕರ್ತ, ನಿಷ್ಠಾವಂತನೂ ಅಹುದು. ನಮ್ಮನ್ನು ನೋಡಿದ ತಕ್ಷಣ ಉಳಿದ (ವೀರಶೈವವಾದಿ) ಲಿಂಗಾಯತರು ಬೇರೆಯಾಗಿಯೇ ಕಾಣುತ್ತಾರೆ. ರಾ.ಬ.ದಳ ಚೌಕಟ್ಟು ಇಲ್ಲದೆ ಬಸವ ತತ್ವ ಪ್ರಚಾರ ಮಾಡಿದರೆ ಹೆಚ್ಚು ಜನರು ಮತ್ತು ಎಲ್ಲರೂ ಬರುತ್ತಾರೆ. ರಾ.ಬ.ದಳದಿಂದ ಬಸವ ತತ್ವಕ್ಕೆ ಒಂದು ಚೌಕಟ್ಟು ಹಾಕಿದಂತೆ ಆಗುತ್ತದೆ ಎನ್ನಿಸುತ್ತಿದೆ. ಈ ಬಗ್ಗೆ ನಿಮ್ಮ ಸಲಹೆ !

★ ಲಿಂಗಾಯತ ಧರ್ಮೀಯರು ಯಾವುದೇ ಒಂದು ತಾತ್ವಿಕ, ಸೈದ್ಧಾಂತಿಕ ಚೌಕಟ್ಟು ಇಲ್ಲದೆ ಅಶಿಸ್ತಿನಿಂದ ನಡೆಯುತ್ತಿದ್ದುದರಿಂದ, ಶಿಸ್ತು ಅಳವಡಿಸಲೆಂದೇ ರಾ.ಬ.ದಳ ರಚಿಸಲಾಗಿದೆ. ಸಾಮೂಹಿಕ ಪ್ರಾರ್ಥನೆ, ಧ್ವಜಾರೋಹಣ, ಸ್ಕಾರ್ಫ್ ಇತ್ಯಾದಿ ಕಾರ್ಯಕ್ರಮಗಳಿಗೆ ಶೋಭೆ ತಂದುಕೊಡುತ್ತವೆ. ಷಟ್‌ಸಂಜ್ಞೆ, ಷಟ್ ಸೂತ್ರ ಇವೆಲ್ಲ ಬಹಳ ಮಹತ್ವಪೂರ್ಣ. ಉಳಿದ ಸಮ್ಮೇಳನ, ಸಭೆ, ಸಮಾರಂಭಗಳಲ್ಲಿ ಕಾಣದ ಒಂದು ವಿಶೇಷತೆಯನ್ನು ಶರಣ ಮೇಳ/ಕಲ್ಯಾಣ ಪರ್ವಗಳಲ್ಲಿ

ಕಾಣುತ್ತೀರಿ. ರಾ.ಬ.ದಳ ಬಿಟ್ಟು ಬಸವ ತತ್ತ್ವವನ್ನು ಹೇಳುತ್ತ ಹೋದರೆ ಜನರು ಜಂಗುಳಿಯಾಗಿ ಸೇರಬಹುದು. ಅವರಲ್ಲಿ ತಾತ್ವಿಕ ಸೂತ್ರವೇ ಇರುವುದಿಲ್ಲ. ವಚನಗಳನ್ನು ಹಾಡಬಹುದು, ನರ್ತಿಸಬಹುದು, ಉಪನ್ಯಾಸ ಮಾಡಬಹುದು. ಸೈದ್ಧಾಂತಿಕ ಬದ್ಧತೆ ಇರುವುದೆ ? ಆದ್ದರಿಂದ ಒಂದು ಚೌಕಟ್ಟಿನಲ್ಲಿಯೇ ಸಮಾಜ ಬೆಳೆಯಬೇಕು. ನಮ್ಮ ರಾ.ಬ.ದಳದ ಚೌಕಟ್ಟು ಸೀಮಿತವಾಗಿಲ್ಲ, ಬಹಳ ವಿಶಾಲವಾಗಿ ಇದೆ. ಜಾತಿ ವರ್ಣ ವರ್ಗ ಲಿಂಗಭೇದವಿಲ್ಲದೆ ಎಲ್ಲರನ್ನೂ ಇಂಬಿಟ್ಟುಕೊಳ್ಳುತ್ತದೆ. ಈಗಂತೂ ರಾ.ಬ.ದಳದ ನಿಷ್ಠೆಯ ಬಗ್ಗೆ ಬಹಳ ಜನರಲ್ಲಿ ವಿರೋಧಿಗಳಲ್ಲೂ ಅಭಿಮಾನವಿದೆ. ಆದರಿಂದ ಒಂದು ಶಿಸ್ತಿನ ಚೌಕಟ್ಟಿಗೆ ಜನರನ್ನು ಆಕರ್ಷಿಸುವುದು ಅಗತ್ಯವಿದೆ.

☐

?ಪ್ರಜಾವಾಣಿ ಪತ್ರಿಕೆಯ ದಿ 23-3-2007ರ ಸಂಚಿಕೆಯಲ್ಲಿ "ಲಿಂಗ ತಾರತಮ್ಯ" ಎಂಬ ಶೀರ್ಷಿಕೆಯಲ್ಲಿ ಒಂದು ವಿಷಯದ ವರದಿ ಬಂದಿದೆ.ಮೈಸೂರಿನಲ್ಲಿ 2 ದಿನಗಳ ಒಂದು ಚಿಂತನಗೋಷ್ಠಿಯನ್ನು (ವೀರಶೈವ) ಮಠಾಧೀಶರು ಏರ್ಪಡಿಸಿದ್ದು, ಅದರಲ್ಲಿ ಮಹಿಳೆಯರಿಗೆ ಪ್ರವೇಶವಿರಲಿಲ್ಲವಂತೆ. ಪತ್ರಿಕಾ ವರದಿಗಾರ್ತಿ ಹೋದಾಗ ಮಹಿಳೆಯರಿಗೆ, ವರದಿಗಾರ್ತಿ ಇದ್ದರೂ ಅವಕಾಶವಿಲ್ಲ ಎಂದು ನಿರಾಕರಿಸಲಾಯಿತಂತೆ. ಈ ವರ್ತನೆ 12ನೆಯ ಶತಮಾನದಲ್ಲೇ ಸಂಪೂರ್ಣ ಸಮಾನತೆಯನ್ನು ಬೋಧಿಸಿದ ಗುರು ಬಸವಣ್ಣನವರಿಗೆ ಮಾಡುವ ಅಪಚಾರವಲ್ಲವೆ ?

★ಬಹುಶಃ ಮಹಿಳೆಯರನ್ನು ನೋಡಿದರೆ ಚಿತ್ತ ಚಂಚಲವಾಗಿ ಮೇನಕೆಯನ್ನು ನೋಡಿದ ವಿಶ್ವಾಮಿತ್ರನ ಪರಿಸ್ಥಿತಿ ಬರಬಹುದು ಎಂಬ ಭಯ ಅಲ್ಲಿ ಸೇರಿದ ಮಠಾಧೀಶರಿಗೆ ಇರಬಹುದು. ಆದ್ದರಿಂದ ಅವರ ಬಗ್ಗೆ ಮಹಿಳೆಯರನ್ನು ಕುರಿತು ಭೇದ ಭಾವವಿದೆ ಎಂದು ಊಹಿಸಿ ಬೇಸರ ಪಟ್ಟುಕೊಳ್ಳುವ ಬದಲು, ಆ ಮಠಾಧೀಶರ ಚಂಚಲ ಚಿತ್ತ ಕುರಿತು ಅನುಕಂಪ ತಾಳುವುದು ಒಳ್ಳಿತು.

ಎರಡನೆಯದಾಗಿ ಬಹುಶಃ ಪ್ರಸುತ್ತ ಸಭೆಯಲ್ಲಿ ಮಹಿಳೆಯರ ವಿರುದ್ಧ ಏನಾದರೂ ಠರಾವು ಪಾಸು ಮಾಡುವ ಉದ್ದೇಶ ಇದ್ದಿರ ಬಹುದು; ಅದಕ್ಕೇ ಒಳಗೆ ಬಿಟ್ಟಿರಲಿಕ್ಕಿಲ್ಲ . ಬಸವಣ್ಣನವರಿಗೆ ಇದರಿಂದ ಅಪಚಾರವಾಗುತ್ತದೆ ಎಂದು ನಿಮ್ಮ ಕಳವಳ. ಆದರೆ ನಿಮಗೇನು ಗೊತ್ತು ಬಹುಪಾಲು ಮಠಾಧೀಶರಿಗೆ ಕ್ರಾಂತಿಪುರುಷ ಬಸವಣ್ಣನವರ ಬಗ್ಗೆ ಬಹಳಷ್ಟು ಅಸಹನೆ, ಆಕ್ರೋಶವಿದೆ. ಅವರು ಬೋಧಿಸಿದ ಸ್ತ್ರೀ ಸಮಾನತೆ ಹಾಗೂ ಸ್ವಾತಂತ್ರ್ಯ, ಏಕದೇವೋಪಾಸನೆ, ಎಲ್ಲ ಜಾತಿಮತಗಳವರಿಗೆ ದೀಕ್ಷೆ ನೀಡಿದುದು, ಸಮಾನತೆ ಬೋಧಿಸಿದ್ದು ನುಂಗಲಾರದ ತುತ್ತು. ಅದನ್ನು ಹೊರಗೆ ತೋಡಿಕೊಳ್ಳಲಾರರು. ಏಕೆಂದರೆ ಜನ ಸಾಮಾನ್ಯರ ಒಲವು ಸಮತಾವಾದಿ ಗುರು ಬಸವಣ್ಣನವರ ಕಡೆಗೆ ಇದೆ. ಅದಕ್ಕೆಂದೇ ಅವರು ವೀರಶೈವವೆಂಬ ನಕಲಿ ತತ್ವವನ್ನು ಹೊರರಾಜ್ಯದಿಂದ ಎರವಲು ತಂದು ಲಿಂಗಾಯತ ಧರ್ಮದ ಶುಚಿತ್ವವನ್ನು, ಇದರ ನಿಜ ಸ್ವರೂಪವನ್ನು ಕೆಡಿಸುತ್ತಲಿದ್ದಾರೆ.

☐ಸಿ.ಪಿ.ಶೇಡಬಾಳ, ಬೈಲಹೊಂಗಲ.

?ವೀರಶೈವ ಹಾಗೂ ಶೈವ ಪರಂಪರೆಗಳು ಭಾರತ ದೇಶದಲ್ಲಿ ಹತ್ತಾರು ಸಾವಿರ ವರ್ಷಗಳ ಪೂರ್ವದಲ್ಲೇ ಇದ್ದ ದ್ರಾವಿಡ ಜನರ ಧರ್ಮಗಳಾಗಿದ್ದವು. ನಮ್ಮ ಪಂಚಪೀಠಾಧೀಶರು ನಮ್ಮೆಲ್ಲರದೇ ಆದ ವೀರಶೈವ ಧರ್ಮದ ಪ್ರಚಾರವನ್ನು ಮಾಡಿ, ಈ ದೇಶದ ದ್ರಾವಿಡರಾದ ನಮ್ಮೆಲ್ಲರನ್ನು ಸಂಘಟಿಸಿದರು. ಇದರಲ್ಲಿ ತಪ್ಪೇನಿದೆ. ಬಸವಣ್ಣನವರ ಬಗ್ಗೆ ಹೇಳುವುದಾದರೆ ಅವರೊಬ್ಬ ಸಮಾಜ ಸುಧಾರಕರು. ಅಂದಾಗ ಪಂಚ ಪೀಠಾಧೀಶರನ್ನು ಏಕೆ ಟೀಕಿಸುತ್ತೀರಿ? ಇದರಿಂದ ಆರ್ಯರ ಪ್ರಭಾವ ಅರ್ಥಾತ್ ವೈದಿಕ ಧರ್ಮದ ಪ್ರಭಾವ ಜಾಸ್ತಿಯಾಗುತ್ತದೆ. ನಮ್ಮ ನಮ್ಮಗಳ ಒಳ ಜಗಳದಿಂದ ದ್ರಾವಿಡ ಧರ್ಮದ ಪ್ರಭಾವ ಕುಗ್ಗುವುದಲ್ಲವೆ ?

★ಶೈವ ಪರಂಪರೆ ಬಹು ಪುರಾತನ ಎಂಬುದರಲ್ಲಿ ಎರಡು ಮಾತಿಲ್ಲ. ಮತ್ತು ಅದರ ಒಂದು ಸೀಳು ವೀರಶೈವ; ಶೈವವು ದ್ರಾವಿಡ ಮೂಲದ್ದುಎಂಬುದೂ ಸರಿ. ಆದರೆ ಪಂಚಾಚಾರ್ಯರು ಹತ್ತಾರು ಸಾವಿರ ವರ್ಷಗಳ ಹಿಂದೆ ಅಥವಾ ಗುರು ಬಸವಣ್ಣನವರಿಗೂ ಪೂರ್ವದಲ್ಲಿ ಇದ್ದರು ಎಂಬುದು ಅಪ್ಪಟ ಸುಳ್ಳು. ಆದಿ ಪಂಚಾಚಾರ್ಯರು ಎಂದು ಹೇಳುವ ಗುಂಪಿನಲ್ಲಿ ಐತಿಹಾಸಿಕ ವ್ಯಕ್ತಿಗಳಾಗಿ ದಾಖಲೆಗೆ ಸಿಗುವವರೆಂದರೆ ರೇವಣ ಸಿದ್ಧರು, ಮರುಳ ಸಿದ್ಧರು, ಮಲ್ಲಿಕಾರ್ಜುನ ಪಂಡಿತಾರಾಧ್ಯರು ಮತ್ತು ಏಕೋರಾಮರ ಇವರ ಹೆಸರುಗಳು 18ನೆಯ ಶತಮಾನದ ಚತುರಾಚಾರ್ಯ ಪುರಾಣದಲ್ಲಿ ಪ್ರಸ್ತಾಪವಾಗುತ್ತಿವೆ.

20ನೆಯ ಶತಮಾನದ 3-4ನೆಯ ದಶಕದಲ್ಲಿ ಕೆಲವು ಕುಮತಿಗಳು ಸೇರಿಕೊಂಡು ಪಂಚಾಚಾರ್ಯರ ಕಲ್ಪನೆ ಸೃಷ್ಟಿಸಿ, ಇವರು ಯುಗ ಯುಗಗಳಲ್ಲಿ ಅವತರಿಸಿದರೆಂದು ಕಾಲ್ಪನಿಕ ಪಾತ್ರಗಳನ್ನು ಹುಟ್ಟಿಸಿ ಕಥೆ ಹೆಣೆದು ಸಮಾಜದಲ್ಲಿ ಗೊಂದಲಕ್ಕೆ ಕಾರಣರಾದರು. ದಿ 2-4-07ರಂದು ಧಾರವಾಡದಲ್ಲಿ ಒಂದು ಕಿರುಹೊತ್ತಿಗೆ ಸಿಕ್ಕಿತು. ಅದು ಲಿಂ|| ಶ್ರೀ ವೀರಪ್ಪ ಬಸಪ್ಪ ಬಿಳಿ ಅಂಗಡಿ, ಹುಬ್ಬಳ್ಳಿ ಅವರು ಪ್ರಥಮತಃ 1932ರಲ್ಲಿ ಬರೆದು, ಈಗ ಪುನರ್ ಮುದ್ರಣಗೊಂಡಿದೆ ಅವರ ಲೇಖನದ ಸಾರಾಂಶ ಹೀಗಿದೆ. ಲಿಂಗಾಯತ ಸಮಾಜದಲ್ಲಿ ಕೆಲವರು ಮುದುಕಯ್ಯ (ಪಂಡಿತ ಕಾಶೀನಾಥ ಶಾಸ್ತ್ರಿ) ಮಲ್ಲಯ್ಯ ಮುಂತಾದವರು ವಿಲಕ್ಷಣ ಕುತಂತ್ರ ಮಾಡಿದರೆಂದು, ಅವರು ಸೃಷ್ಟಿಸಿದ ಭ್ರಾಂತಿಗೆ ತಮ್ಮಂತಹವರು ಸಹ ಒಳಗಾದರೆಂದು ಬರೆಯುತಾರೆ. ಇವರು ಬಿ.ಎಸ್‌ಸಿ, ಎಲ್.ಎಲ್.ಬಿ ಪದವೀಧರರು, ವಕೀಲರು. "ಹಳೆಯ ದಾಖಲೆ ಸಿಕ್ಕಿದೆ. ನಮ್ಮ ಧರ್ಮ (ಲಿಂಗಾಯತ) ವೀರಶೈವ. ಇದು ವೇದಪೂರ್ವದ್ದು. ಪಂಚಾರ್ಚಾಯರು ಇದರ ಸ್ಥಾಪಕರು." ಈ ಕಟ್ಟುಕಥೆ ಹಬ್ಬಿಸಿದಾಗ ಮೊದಲು ಹೊಸ ಇತಿಹಾಸ ಸಿಕ್ಕಿತೆಂದು (ಸಂ)ಭ್ರಮಿಸಿದವರಿಗೆ ಯಾವಾಗ ಈ ಲಿಂಗೀಬ್ರಾಹ್ಮಣರು ಲಿಂಗಾಯತ ಸಮಾಜವನ್ನು ವರ್ಣಗಳ ಪ್ರಕಾರ ವಿಭಜಿಸಲು ತೊಡಗಿದರೋ ಆಗ ಲಿಂಗಾಯತ ಸಮಾಜದ ಮುಖಂಡರು ಬೆಚ್ಚಿಬಿದ್ದರು. ಆಗ ಅವರ ಅರಿವಿಗೆ ಬಂದಿತಂತೆ, ಇದು ಬಸವಣ್ಣನವರ ಪ್ರಭಾವ ಕಡಿಮೆ ಮಾಡಲು ಹೂಡಿರುವ ದೊಡ್ಡ ಸಂಚು ಎಂದು. ಆಗ ಶರಣ.ವೀ.ಬಿ.ಬಿಳಿ ಅಂಗಡಿ ಅವರು ಬಸವಣ್ಣನವರೇ ಲಿಂಗಾಯತ ಮತ ಸ್ಥಾಪಕರು ಎಂಬ ಈ ಕೃತಿಯನ್ನು ಬರೆದಿದ್ದಾರೆ.

ಶೈವ, ವೀರಶೈವ ಪುರಾತನ ನಿಜ. ಆದರೆ ಅವೆರಡಕ್ಕಿಂತಲೂ ಧರ್ಮಗುರು ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಬೇರೆಯೇ ಇದೆ. ಮೂಲ ಶೈವವು ಶಿವನು ಬೋಧಿಸಿದಾಗ ಅತ್ಯಂತ ಪ್ರಗತಿ ಪರವಾಗಿ ಸಮಾನತೆಯನ್ನು ಬೋಧಿಸುತ್ತಿತ್ತು. ನಂತರ ಅದು ವೈದಿಕ ವರ್ಣಾಶ್ರಮದ ಪ್ರಭಾವಕ್ಕೆ ಒಳಗಾಗಿದ್ದರಿಂದ ಸುಳ್ಳಿನ ಜಾಲ ಹೆಣೆದು ಇಡೀ ಸಮಾಜವನ್ನು ದಾರಿ ತಪ್ಪಿಸಿದ ಪಂಚ ಪೀಠಾಧೀಶರನ್ನು ಟೀಕಿಸದೆ ಗತ್ಯಂತರವಿಲ್ಲ

☐ಶಾಂತಾದೇವಿ ಪಾಟೀಲ್, ಹುಬ್ಬಳ್ಳಿ

? ನೀವು ಖಂಡಿತವಾಗಿಯೂ ಸತ್ಯವನ್ನು ಹೇಳುವುದರಿಂದ ಅನೇಕರು ನಿಮ್ಮನ್ನು ಟೀಕಿಸುವರು, ನಿಂದಿಸುವರು. ಇದರಿಂದ ನಮ್ಮ ಮನಸ್ಸಿಗೆ ನೋವಾಗುತ್ತದೆ.

★ಮನಸು ನೋಯಿಸಿಕೊಳ್ಳಬಾರದು. ತಿಪ್ಪೆ ಸಾರಿಸುವ ಮಾತನಾಡುವವರನ್ನು ಜಗತ್ತು ಇದ್ದಾಗ ಕೊಂಡಾಡುತ್ತದೆ. ಸತ್ಯವಾದಿಗಳನ್ನು ಇದ್ದಾಗ ಟೀಕಿಸಿ ನಿಂದಿಸಿದರೆ ನಂತರ ಅವರು ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುತ್ತಾರೆ. ಜನರಿಗೆ ಹೆದರಿ ಸತ್ಯವನ್ನು ನುಡಿಯದಿದ್ದರೆ ಬಹುದೊಡ್ಡ ಅನ್ಯಾಯವನ್ನು ನಾವು ಮಾಡಿದಂತೆ ಆಗುತ್ತದೆ. ಉದಾಹರಣೆಗೆ ಧರ್ಮಪಿತರು, ಗುರು ಗೋವಿಂದ ಸಿಂಗ್ ಮುಂತಾದವರ ಚರಿತ್ರೆ ನೋಡಿರಿ.

☐ಗವೀಶ್,ಕೊಪ್ಪಳ

?ಬಸವ ಧರ್ಮ ಪೀಠಕ್ಕೂ, ಬಸವ ತತ್ತ್ವ ಪ್ರಸಾರ ಮಾಡುವ ಅಥವಾ ಬಸವಣ್ಣನವರ ಹೆಸರನ್ನು ಹೊಂದಿರುವ ಇನ್ನಿತರ ಕೆಲವು ಸಂಸ್ಥೆಗಳಿಗೂ ಇರುವ ವ್ಯತ್ಯಾಸವೇನು ?

★ಬಸವಣ್ಣನವರ ತತ್ತ್ವ ನಮಗೆ ಕಡ್ಡಾಯ (Compulsory)ವಿಷಯ, ಇನ್ನಿತರ ಅನೇಕರಿಗೆ ಅದು ಐಚ್ಛಿಕ (Optional). ನಮಗೆ ಅದು ಸಂಪೂರ್ಣ ಊಟ, ಮತ್ತೆ ಹಲವರಿಗೆ ಊಟದಲ್ಲಿ ನಂಚಿಕೊಳ್ಳುವ ಉಪ್ಪಿನ ಕಾಯಿಯಂತೆ. ಹೀಗಾಗಿ ಗುರು ಬಸವಣ್ಣನವರೇ ಧರ್ಮಗುರು, ಲಿಂಗಾಯತ

ಧರ್ಮ ಸಂಸ್ಥಾಪಕರು, ನವ ಧರ್ಮ ದ್ರಷ್ಟಾರರು ಎಂದು ಧೈರ್ಯದಿಂದ ಹೇಳುವ ಆತ್ಮಬಲ ಸಹ ಅಂಥ ಕೆಲವು ಸಂಸ್ಥೆಗಳಿಗೆ ಇಲ್ಲ.

☒ ಕರುಣಾಕರ ಮಾಗಾಂವ,ಗುಲಬರ್ಗಾ.

?ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ ಎಂಬ ವಚನದಲ್ಲಿ ಧರ್ಮಪಿತರು "ರಾಶಿ ಕೂಟ ಗಣ ಸಂಬಂಧ ಉಂಟೆಂದು ಹೇಳಿರಯ್ಯ,ಚಂದ್ರಬಲ ತಾರಾಬಲ ಉಂಟೆಂದು ಹೇಳಿರಯ್ಯ" ಎನ್ನುತ್ತಾರೆ.ಅಂದರೆ ಅವರಿಗೂ ಇದರಲ್ಲಿ ನಂಬಿಕೆ ಇತ್ತೆಂದು ಅರ್ಥವಾಗದೆ?

★ಯಾರೇ ಆಗಲಿ ತತ್ವ - ಸಿದ್ಧಾಂತ ಪ್ರತಿಪಾದಿಸುವಾಗ ರೂಢಿಯಲ್ಲಿರುವ ಪದಗಳನ್ನು ಬಳಸಿಯೇ ಖಂಡನೆ ಅಥವಾ ಮಂಡನೆ ಮಾಡಬೇಕಾಗುತ್ತದೆ. ವೈದಿಕ ನಂಬಿಕೆ ಪ್ರಕಾರ ಮನುಷ್ಯರ ಭಾವನೆಗಳಿಗಿಂತಲೂ ಜಾತಕ ಎಂಬ ಪೇಪರ ತುಂಡು ಮುಖ್ಯ ಎಲ್ಲರ ಮನಸು ಒಪ್ಪಿಗೆ ನೀಡಿದ್ದರೂ ಜಾತಕ ಅಡ್ಡಿಯಾಗಬಹುದು. ಬಸವ ಧರ್ಮದಲ್ಲಿ ಹಾಗಲ್ಲ. ಎಮ್ಮವರು ಬೆಸಗೊಂಡರೆ, ಒಪ್ಪಿಗೆ ಉಂಟಾದರೆ ಅದು ಶುಭ ಲಗ್ನ (ಹೊಂದಾಣಿಕೆ)ಎಂದು ಭಾವಿಸಬೇಕು. ಏಕೆಂದರೆ ಸೃಷ್ಟಿಕರ್ತನು ಸರ್ವಶಕ್ತನೂ ಆದ ಲಿಂಗದೇವನನ್ನು ಪೂಜಿಸುವ ಪುಣ್ಯ ನಮ್ಮೊಡನೆ ಇದೆ.

☒ ಹೆಸರು, ಊರು ಬೇಡ, ರಾ.ಬ.ದಳದ ಪ್ರಮುಖರು

?ರಾಷ್ಟ್ರೀಯ ಬಸವ ದಳ ಎಲ್ಲರನ್ನು ಇಂಬಿಟ್ಟುಕೊಳ್ಳುತ್ತದೆ.ಓರ್ವ ದಾನಿಗಳು ಸೈಟನ್ನು ಕೊಟ್ಟಿದ್ದಾರೆ. ವೀರಶೈವ ವಾದಿಗಳು ಇದ್ದುದ್ದರಲ್ಲಿಯೇ ಆರ್ಥಿಕವಾಗಿ ಚೆನ್ನಾಗಿದ್ದಾರೆ. ಬಸವ ಮಂಟಪ ಪ್ರಾರ್ಥನಾ ಮಂದಿರ ಕಟ್ಟಲು ಹಣ ಕೇಳಿದರೆ, ನೀವು ಎಲ್ಲ ಜಾತಿಯವರನ್ನು ಸೇರಿಸಿಕೊಳ್ಳುತ್ತೀರಿ. ನಮಗೆ ಸರಿ ಬರದು. ಎನ್ನುತ್ತಾರೆ. ಪ್ರಾರ್ಥನೆಗೆ ಬರುವವರಿಗೆ ಆರ್ಥಿಕ ಶಕ್ತಿ ಇಲ್ಲ, ಬೇರೆ ಜನಾಂಗದವರನ್ನು ಕೇಳಿದರೆ ನಿಮ್ಮವರೇ ಬಹಳ ಶ್ರೀಮಂತರಿರುವಾಗ ನಮ್ಮನ್ನೇಕೆ ಕೇಳುತ್ತೀರಿ? ಎನ್ನುತ್ತಾರೆ. ಏನು ಮಾಡಬೇಕು?

★ ಗುರು ಬಸವಣ್ಣನವರ ತತ್ವ ಪ್ರಚಾರ ನಡೆಸಲು ಮನಸ್ಸಿಲ್ಲದವರ ವರ್ತನೆ ಹೀಗೇ ಇರುತ್ತದೆ. ಇದಕ್ಕಾಗಿ ಎದೆಗೆಡಬೇಕಾಗಿಲ್ಲ. ಇಂಥ ಜಾತಿವಾದಿ ವೀರಶೈವರಿಗಾಗಿ ನಾವು ಆಧ್ಯಾತ್ಮಿಕ ಆಸಕ್ತಿ ಇರುವ ಅನ್ಯಜಾತಿಯವರನ್ನು ದೂರವಿಟ್ಟರೆ ಧರ್ಮಪಿತ ಬಸವಣ್ಣನವರು ಮೆಚ್ಚರು. ಪ್ರಾಜ್ಞ ಜನರು ಇದ್ದೇ ಇರುತ್ತಾರೆ. ಅವರಿಗೆ ರಾ.ಬ.ದಳದ ಉದಾತ್ತ ವಿಚಾರ ತಿಳಿಸಿ ದೇಣಿಗೆ ಸಂಗ್ರಹಿಸಿರಿ. ನಮ್ಮ ವಿಶಾಲ ದೃಷ್ಟಿಕೋನವನ್ನು ಮನವರಿಕೆ ಮಾಡಿಕೊಟ್ಟು ಎಂ.ಎಲ್.ಎ, ಎಂ.ಪಿ. ಫಂಡ್‌ಗಳಿಂದ ಆರ್ಥಿಕ ನೆರವು ಪಡೆಯಿರಿ.

☒ ರಾ.ಬ.ದಳ, ಊರು ಬೇಡ,

?ನಾವು ಬಸವ ಜಯಂತಿಯ ಮೆರವಣಿಗೆ-ಪಥ ಸಂಚಲನವನ್ನು ನಿಷ್ಠೆಯಿಂದ ಮಂತ್ರ ಜಪ ಮಾಡುತ್ತ ಮಾಡುತ್ತೇವೆ.ಬಿಳಿಯ ಬಟ್ಟೆಯನ್ನುಟ್ಟು ಕಾವಿಯ ಸ್ಕಾರ್ಫ್ ಹಾಕಿ ಸಾಗುತ್ತೇವೆ. ಬಸವ ಸಂದೇಶದ ಕರಪತ್ರ ಹಂಚುತ್ತೇವೆ. ವೀರಶೈವ ಸಂಘದವರು ಮುಖಂಡರು ಅವರ ಮನೆಯವರು ಭಾಗವಹಿಸುವುದಿಲ್ಲ. ಆದರೆ ಅವರು ಏರ್ಪಡಿಸಿದ ಮೆರವಣಿಗೆಯಲ್ಲೇ ನೀವು ಭಾಗಿಗಳಾಗಿ ಎಂದು ಒತ್ತಾಯ ತರುತ್ತಿದ್ದಾರೆ. ಏನು ಮಾಡಬೇಕು ?

★ನಿಮ್ಮನ್ನು ಕರೆಯುವವರು ಹೇಗಿದ್ದಾರೆ, ಏನು ಉದ್ದೇಶ ಇಟ್ಟು ಕೊಂಡಿದ್ದಾರೆ ಎಂಬುದರ ಆಧಾರದ ಮೇಲೆ ನೀವು ಸ್ಥಳೀಯವಾಗಿ ನಿರ್ಧರಿಸಬೇಕು. ಕೆಲವರು ರಾ.ಬ.ದಳದವರ ನಿಷ್ಠೆ ಶೋಭೆ ತರುತ್ತದೆ ಎಂದು ಅಭಿಮಾನದಿಂದ ಕರೆದರೆ ಮತ್ತೆ ಕೆಲವರು ರಾ.ಬ,ದಳಕ್ಕೆ ಕೀರ್ತಿ ಸಿಗಬಾರದು ಎಂದು ಗುಂಪಿನೊಳಗೆ ಅನಾಮಿಕರಾಗಲಿ ಎಂದು ಕರೆಯುತ್ತಾರೆ. ಅದನ್ನು ಅರಿತುಕೊಂಡು ನಿರ್ಧರಿಸಿರಿ. ಎಂಥಾ ಪ್ರಸಂಗದಲ್ಲೂ ನಮ್ಮ ತತ್ವ ನಿಷ್ಠೆಯನ್ನು ಬಿಟ್ಟುಕೊಡಬಾರದು. ಬಸವ ಜಯಂತಿಯ ಮೆರವಣಿಗೆಯನ್ನು ವರ್ಷದಿಂದ ವರ್ಷಕ್ಕೆ ಚೆನ್ನಾಗಿ ಸಂಘಟಿಸಬೇಕು.

ದಾಸೋಹಂ ಭಾವದ ಸಾಕಾರ ಎನ್. ಪುಟ್ಟರುದ್ರ

80 ವರ್ಷಗಳನ್ನು ಕಂಡಿರುವ ಶರಣ. ಎನ್.ಪುಟ್ಟರುದ್ರ ಅವರು ಲಿಂ॥ ಶರಣ ದಂಪತಿಗಳಾದ ನಂಜುಂಡಪ್ಪ ಮತ್ತು ಚನ್ನವೀರಮ್ಮನವರ ಸುಪುತ್ರರು. ಬಾಲ್ಯದಿಂದಲೂ ತೀಕ್ಷ್ಣ ಮತಿಯಾಗಿದ್ದ ಅವರು ಬಿ.ಇ.ಪದವೀಧರರಾದ ಮೇಲೆ ಜೂನಿಯರ್ ಇಂಜಿನಿಯರ್ ಆಗಿ ವೃತ್ತಿ ಜೀವನ ಆರಂಭಿಸಿ, ಸೂಪರಿಂಟೆಂಡಿಂಗ್ ಇಂಜನಿಯರ್ ಪದವಿಯವರೆಗೆ ಸಾಗಿ 1983ರಲ್ಲಿ ಸೇವಾ ನಿವೃತ್ತಿ ಹೊಂದಿದರು. ಉದ್ಯೋಗದಲ್ಲಿ ನಿವೃತ್ತಿ ಹೊಂದಿದ್ದಾರಾದರೂ ಸೇವೆಯಲ್ಲಿ ಮತ್ತಷ್ಟು ಕ್ರಿಯಾಶೀಲರಾಗಿದ್ದಾರೆ. ಕಾಯಕ ನಿಷ್ಠೆ, ಪ್ರಾಮಾಣಿಕತೆ, ನಿಸ್ವಾರ್ಥತೆ, ಕಿಂಕರ ಭಾವ, ಸಮಾಜ ಸೇವೆ, ದೇವ ಶ್ರದ್ಧೆ ಎಂಬ ಷಟ್ ಸಂಪತ್ತುಗಳ ಸಂಗಮವಾಗಿದ್ದಾರೆ ಶರಣ ಎನ್. ಪುಟ್ಟರುದ್ರ.

"ಜಗತ್ತು ದೇವರ ಕೊಡುಗೆ, ಇದರ ಮಾಲೀಕತ್ವ ಅವನದು. ನಾವೆಲ್ಲ ದೇವನ ಸೇವಕರು" ಎಂಬ ವಿನಯ ಪೂರ್ಣ ಶರಣಾಗತಿಯೇ ದಾಸೋಹಂ ಭಾವ. ಇಂಥ ಮನೋಭಾವವು ಸಾಕಾರಗೊಂಡು ಸಂಚರಿಸುತ್ತಿದ್ದರೆ ಅದು ಶರಣ .ಪುಟ್ಟರುದ್ರಪ್ಪನವರ ರೂಪದಲ್ಲಿ ಎಂದರೆ ಉತ್ಪ್ರೇಕ್ಷೆಯಲ್ಲ. ಯಾವ ಪ್ರತಿಫಲಾಪೇಕ್ಷೆಯನ್ನೂ ಬಯಸದೆ "ಸೇವೆಗಾಗಿ ಸೇವೆ, ಸ್ವಸಂತೋಷಕ್ಕಾಗಿ ಸೇವೆ" ಎಂದು ಆದರ್ಶ ಸೇವೆಯ ವ್ಯಾಖ್ಯಾನವನ್ನು ನೀಡಬೇಕೆನ್ನುವವರು ಪುಟ್ಟರುದ್ರಪ್ಪನವರ ನಡೆ-ನುಡಿ ಜೀವನವನ್ನು ನೋಡಿದರೆ ಸಾಕು. 1973ನೆಯ ಇಸವಿ ಪರಮಪೂಜ್ಯ ಲಿಂ॥ ಮಹಾ ಜಗದ್ಗುರು ಲಿಂಗಾನಂದ ಸ್ವಾಮಿಗಳು ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಪ್ರವಚನ ಮಾಡುತ್ತಿದ್ದರು. ಚಾಮರಾಜಪೇಟೆಯಲ್ಲಿ ಅಂಥದೊಂದು ಪ್ರವಚನ ನಡೆದಾಗ ಶ್ರೋತೃವಾಗಿ ಪರಿಚಿತರಾದ ಪುಟ್ಟರುದ್ರಪ್ಪ, ನಂತರ ನಮ್ಮ ಸಂಸ್ಥೆಗಳ ಅವಿಭಾಜ್ಯ ಅಂಗವೇ ಆದರು. ರಾಜಾಜಿ ನಗರದ ಬಸವ ಮಂಟಪದ ನಿರ್ಮಾಣದಿಂದ ಅವರ ಸಲಹೆ, ಸೇವೆ ಆರಂಭವಾಯಿತು.

ಆಗಿನ್ನೂ ಸರ್ಕಾರಿ ಅಧಿಕಾರಿಯಾಗಿದ್ದರು. ಕೆ.ಇ.ಬಿ.ಕಾರ್ಯಾಲಯಕ್ಕೆ ಜೀಪಿನಲ್ಲಿ ಬಂದವರು ಕೆಲಸದ ಅವಧಿಯ ನಂತರ ಬಸವ ಮಂಟಪದ ಉಸ್ತುವಾರಿಗೆ ಬರುತ್ತಿದ್ದರು.ಆದರೆ ಕೆ.ಇ.ಬಿ. ಕಾರ್ಯಾಲಯದಿಂದ ನಡೆದು ಬರುತ್ತಿದ್ದರೇ ವಿನಾ ಸರ್ಕಾರಿ ಜೀಪನ್ನು ಬಳಸುತ್ತಿರಲಿಲ್ಲ. ಒಮ್ಮೆ ಒಂದು ಊರಿಗೆ ಪ್ರವಚನಕ್ಕೆ ಹೋದಾಗ, ಶರಣ ಪುಟ್ಟರುದ್ರಪ್ಪನವರು ನಮಗೆ ಬಹಳ ಆತ್ಮೀಯರು ಎಂದು ತಿಳಿದಾಗ, ಅಲ್ಲಿಯ ಓರ್ವ ಅಧಿಕಾರಿ ಹೇಳಿದರು, "ತಮ್ಮ ಸಾಮಗ್ರಿಯನ್ನು ಸರ್ಕಾರ ಖರೀದಿಸಲು ಶಿಫಾರಸು ಮಾಡಬೇಕೆಂದು ಓರ್ವ ಉದ್ಯಮಿ ನೋಟಿನ ಕಂತೆಯೊಡನೆ ಬಂದಾಗ ಪುಟ್ಟರುದ್ರಪ್ಪ ಭೇಟಿ ಸಹ ಆಗದೆ ಗದರಿಸಿ ಕಳಿಸಿದರು " ಎಂದು. ಬಹುಶಃ ಇಂಥ ಪ್ರಾಮಾಣಿಕ, ದಕ್ಷ ಅಧಿಕಾರಿಗಳು ಭವಿಷ್ಯತ್ತಿನಲ್ಲಿ ಪುನ ನಮ್ಮ ದೇಶದಲ್ಲಿ ಸಿಗುವುದೇ ದುರ್ಲಭವಾಗಬಹುದು.

ಇನ್ನು ಸಮಾಜ ಸೇವೆಯ ವಿಷಯದಲ್ಲಂತೂ ಅವರೊಡನೆ ಹೋಲಿಸಲು ನಮ್ಮ ಕಣ್ಣಿಗಂತೂ ಯಾರೂ ಕಾಣುತ್ತಿಲ್ಲ. ಬಹುಶಃ ಅವರು ತಮ್ಮ ಸಂಸಾರ ನಿರ್ವಹಣೆಗೆ ಎಷ್ಟೂ ಸಮಯ ಕೊಡದೆ ಪರಾರ್ಥಕ್ಕಾಗಿಯೇ ಜೀವನದ ಬಹುಭಾಗವನ್ನು ಸವೆಸಿದ್ದಾರೆ ಎಂದರೆ ಮುಖ ಸ್ತುತಿಯಲ್ಲ. ಒಮ್ಮೆ ಲಿಂ॥ ಶರಣ ಡಿ.ಎಂ.ಚಂದ್ರಶೇಖರ್ (ಕರ್ನಾಟಕ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರು) ಅವರ ಬಳಿಗೆ ಶರಣ ಮೇಳದ ಕಾಣಿಕೆ ಸಂಗ್ರಹಕ್ಕೆ ಪುಟ್ಟರುದ್ರಪ್ಪ ಹೋಗಿ ಬಂದ ಮೇಲೆ ಶ್ರೀ ಚಂದ್ರಶೇಖರ್ ಹೇಳಿದರು. "ಪುಟ್ಟರುದ್ರಪ್ಪನಂಥವರು ಸಿಗುವುದು ದುರ್ಲಭ. ಅವರು ನಿಮ್ಮ ಸಂಸ್ಥೆಗೆ ಒಂದು ದೊಡ್ಡ ಆಸ್ತಿ." ಈ ಮಾತು ನೂರಕ್ಕೆ ನೂರು ಸತ್ಯ. ಶರಣ. ಪುಟ್ಟರುದ್ರಪ್ಪ ನಮ್ಮ ಸಂಸ್ಥೆಗೆ ಮಾತ್ರವಲ್ಲ. ಇಡೀ ಸಮಾಜಕ್ಕೆ ಒಂದು ದೊಡ್ಡ ಜಂಗಮ ಆಸ್ತಿ; ಹಲವಾರು ಸಂಘ - ಸಂಸ್ಥೆಗಳ ಬೆನ್ನೆಲುಬು.

ಹರಗಣ ಭಕ್ತಿಯ ಮಾಳ್ಪನೆಂತವ್ವ
ಮಾದಲಾಂಬಿಕಾ ನಂದನನು ।
ಬಿಜ್ಜಳನ ಅರಮನೆಯ ನ್ಯಾಯವ
ನೋಳ್ಪನೆಂತವ್ವ ಮಾದರಸ ಸುತನು ।

ಎಂದು ನೀಲಗಂಗಾ ತಾಯಿ ಗುರು ಬಸವಣ್ಣನವರ ಕಾರ್ಯವ್ಯಾಪ್ತಿ ನೋಡಿ ಉದ್ಗಾರ

ತೆಗೆಯುತ್ತಾರೆ. ಅದೇ ರೀತಿ ಪುಟ್ಟರುದ್ರಪ್ಪನವರು; ಸಹ ಕಾರ್ಯಶೀಲರು, ವಿವಿಧ ಸಂಘ-ಸಂಸ್ಥೆಗಳ ಕಾರ್ಯ ಕಲಾಪ ನೋಡಿಕೊಳ್ಳುವರು; ಧಾರ್ಮಿಕ ಪ್ರವಚನಗಳು ನಡೆಯುವಲ್ಲಿಗೆ ಹೋಗುವರು. ಮನೆ ಸೇರುವುದು ರಾತ್ರಿ 10 ನಂತರ ಮನೆ ಬಿಡುವುದು ಬೆಳಿಗ್ಗೆ 8 ರ ವೇಳೆಗೆ, ಇಡೀ ದಿವಸ 80 ರ ವೃದ್ಧಾಪ್ಯದಲ್ಲೂ ಕಾರ್ಯ ನಿರತರಾಗಿರುವುದನ್ನು ಕಂಡು ಯುವಕರು ನಾಚಬೇಕು. ಇಂಥ ಉತಾಹಕ್ಕೆ ಪ್ರೇರಕ ಶಕ್ತಿ ಸೇವೆ ಮಾಡುವ ಹಂಬಲ. ಈ ಮಧ್ಯೆ ಸ್ಕೂಟರಿನವನೊಬ್ಬ ಅಪಘಾತ ಮಾಡಿ ಕಾಲಿಗೆ ತುಂಬಾ ಪೆಟ್ಟಾಗಿ ನಡೆಯುವಾಗ ಸಮತೋಲನ ತಪ್ಪುತ್ತದೆ. ತುಂಬಾ ಆತಂಕಗೊಂಡು ನಾನು ಹೇಳಿದೆ, "ನೀವಿನ್ನು ಹೆಚ್ಚು ವಿಶ್ರಾಂತಿ ಪಡೆಯಬೇಕು. ಒಬ್ಬೊಬ್ಬರೇ ಬಸ್ಸಿನಲ್ಲಿ ಅಡ್ಡಾಡಬಾರದು." ಆಗ ಪುಟ್ಟರುದ್ರಪ್ಪ ಹೇಳಿದರು, "ಆಯುಷ್ಯ ಎಷ್ಟಿದೆಯೋ ಗೊತ್ತಿಲ್ಲ. ಅಂತಿಮ ದಿನಗಳು ಹತ್ತಿರ ಬರುತ್ತಿವೆ. ಆದ್ದರಿಂದ ಜೀವನದ ಪ್ರತಿ ಗಳಿಗೆಯೂ ಸೇವೆಯಲ್ಲಿ ಸಾರ್ಥಕವಾಗಿ ಸವೆಯಲಿ. ನನಗಂತೂ ಮನೆಯಲ್ಲಿ ಕೆಲಸವಿಲ್ಲದೆ ಕೂರಲು ಸಾಧ್ಯವಾಗದು" ಎಂದರು. ಆಶ್ಚರ್ಯ - ಅಭಿಮಾನ-ಮೆಚ್ಚುಗೆ ನನ್ನಲ್ಲಿ ಮೂಡಿದವು.

ವಿಶ್ವಕಲ್ಯಾಣ ಮಿಷನ್, ಬಸವ ಧರ್ಮ ಪೀಠ, ಮರಿಯಪ್ಪ ಹಾಸ್ಟೆಲ್, ಸಂಪನ್ನಪ್ಪ ಹಾಸ್ಟೆಲ್, ಆನೇಕಲ್ ತಿಮ್ಮಯ್ಯ ಬಲಿಜ ಹಾಸ್ಟೆಲ್, ವಿಠಲ ವಿಹಾರ ಧರ್ಮ ಸಂಸ್ಥೆ, ನಗರ್ತ ಸಮಾಜದ ಸಂಘಟನೆಗಳು, ಪ್ರಜಾಪಿತ ಬ್ರಹ್ಮ ಕುಮಾರಿ ಸಂಸ್ಥೆ-ಇವೆಲ್ಲಕ್ಕೂ ಪುಟ್ಟರುದ್ರಪ್ಪನವರ ಮಾರ್ಗದರ್ಶನ ಬೇಕು. ಅದರಲ್ಲೂ ಲಿಂ॥ ಶರಣ ಬಿ.ಕೆ.ಮರಿಯಪ್ಪ ಹಾಸ್ಟೆಲ್ ಒಂದು ಮಾದರಿ ಸಂಸ್ಥೆ. ಹೆಮ್ಮರವಾಗಿ ಬೆಳೆದಿರುವ ಅದರ ಮೂಲ ಬೇರು - ದಾನಿ ಲಿಂ॥ ಶರಣ ಬಿ.ಕೆ.ಮರಿಯಪ್ಪನವರಾದರೆ, ಅದರ ಕಾಂಡ ಶರಣ. ಪುಟ್ಟರುದ್ರಪ್ಪನವರು. ಅದರಲ್ಲಿ ಓದಿರುವ ಅನೇಕರು ಇಂದು ಆಚಾರ-ವಿಚಾರ, ನಡೆ-ನುಡಿ ಎಲ್ಲದರಲ್ಲೂ ಉತ್ತಮರಾಗಿರುವುದಲ್ಲದೆ ಬಹು ದೊಡ್ಡ ಸ್ಥಾನಮಾನ ಪಡೆದಿರುವವರಾಗಿದ್ದಾರೆ.

ಗುಣವಿದ್ದಲ್ಲಿ ಗೌರವಿಸುವ, ಜ್ಞಾನವಿದ್ದಲ್ಲಿ ತಲೆ ಬಾಗುವ ಉದಾತ್ತ ಗುಣದಿಂದ ಶರಣ ಪುಟ್ಟರುದ್ರಪ್ಪ ವಿಶೇಷ ವ್ಯಕ್ತಿಯಾಗಿ ಕಾಣುತಾರೆ. ಆದರೆ ಅಸತ್ಯವನ್ನು ಖಂಡಿಸುವಲ್ಲಿ ಮಾತ್ರ ಅಷ್ಟೇ ನಿಷ್ಠುರರಾಗಿದ್ದಾರೆ. ಗುರು ಬಸವಣ್ಣನವರು, ಎಡದ ಕೈಯಲ್ಲಿ ಹಾಲು ಬಟ್ಟಲು ಬಲದ ಕೈಯಲ್ಲಿ ಓಜುಗಟ್ಟಿಗೆ ಅಂದರೆ ಶಿಕ್ಷಿಸುವ ಕೋಲು ಹಿಡಿದಂತೆ ದೇವರ ಕಲ್ಪನೆ ಕೊಡುತಾರೆ. ಹಾಲು ರಕ್ಷೆ ಅಥವಾ ಅನುಗ್ರಹದ ಸಂಕೇತವಾದರೆ, ಕೋಲು ಶಿಕ್ಷೆಯ ಸಂಕೇತ. ಈ ಪರಿಕಲ್ಪನೆಯ ಸಾಕಾರವೇ ಭೃತ್ಯಾಚಾರ ಮತ್ತು ಗಣಾಚಾರ. ಭೃತ್ಯಾಚಾರ, ವಿನಯ ಹಾಗೂ ಸೇವಾಭಾವವನ್ನು ಬೋಧಿಸಿದರೆ ಗಣಾಚಾರವು ಅನ್ಯಾಯ - ಅಸತ್ಯಗಳನ್ನು ಪ್ರತಿಭಟಿಸುವ ಹೋರಾಟದ ಸಂಕೇತವಾಗುತ್ತದೆ. ಪುಟ್ಟರುದ್ರಪ್ಪನವರಲ್ಲಿ ಈ ಗುಣಗಳನ್ನು ಕಾಣಬಹುದು. ಅಧ್ಯಯನ ಶೀಲ ಪ್ರವೃತ್ತಿಯ ಜೊತೆಗೆ ಹಾಸ್ಯವೂ ಮೇಳೈಸಿರುವ ಪುಟ್ಟರುದ್ರಪ್ಪ ಅಸಂಖ್ಯಾತ ನಗೆಹನಿಗಳನ್ನು ಹೇಳಿ ನಗಿಸುತ್ತಲೇ ಇರುತಾರೆ. ಕಾಯಿಲೆಗಳಿಗೆ ಅವರು ಕಂಡು ಹಿಡಿದಿರುವ ಮದ್ದು ಎಂದರೆ ಕೆಲಸ, ಅಧ್ಯಯನ ಮತ್ತು ಬರವಣಿಗೆ. ದೇಹ ಧರ್ಮಕ್ಕನುಗುಣವಾಗಿ ಜ್ವರ ಮುಂತಾದ ಕಾಯಿಲೆ ಬಂದರೂ ಮರಿಯಪ್ಪ ಹಾಸ್ಟೆಲ್ ಸಂದರ್ಶನ ತಪ್ಪಿಸುವುದಿಲ್ಲ. ಇನ್ನೂ ತೀರಾ ತೊಂದರೆಯಾದರೆ, ಮನೆಯಲ್ಲಿ ಉಳಿಯಬೇಕಾದ ಅನಿವಾರ್ಯತೆ ಉಂಟಾದರೆ ಫೋನ್ ಬಳಿ ಕುಳಿತು ಹಾಸ್ಟೆಲ್‌ಗಳ ವ್ಯವಹಾರ ಕುರಿತು ಬರವಣಿಗೆ ಇಲ್ಲವೆ ಅಧ್ಯಯನದಲ್ಲಿ ನಿರತರಾಗಿರುತ್ತಾರೆ. ಹೀಗೆ ಸೇವೆಯೇ ಪುಟ್ಟರುದ್ರಪ್ಪನವರಿಗೆ ನಿಜವಾದ ತಪಸಾಗಿದೆ. ಜೀವನವೆಂದರೆ ಸುಖ-ದುಃಖ, ನೋವು-ನಲಿವು, ಸಮಸ್ಯೆಗಳ ಆಗರ, ಎಲ್ಲರ ಬದುಕಿನಲ್ಲಿಯೂ ಸಮುದ್ರದ ಅಲೆಗಳಂತೆ ಬಂದು ಎರಗುತ್ತಿರುತವೆ. ಅಂಥ ಪ್ರಸಂಗಗಳು ಬಂದೆರಗಿದಾಗಲೂ ಪುಟ್ಟರುದ್ರಪ್ಪನವರು ಮಾನಸಿಕ ಸಮತೋಲನ ಕಳೆದುಕೊಳ್ಳದೆ ಸ್ಥಿತಿಪ್ರಜ್ಞರಾಗಿಯೇ ಇರುತಾರೆ. ಸಾಮಾನ್ಯವಾಗಿ ಹಲವಾರು ಸಂಘ-ಸಂಸ್ಥೆಗಳನ್ನು ನಿರ್ವಹಿಸುವ ಅನೇಕರು ಧನ ಸಂಪಾದನೆಯನ್ನೇ ಮುಖ್ಯ ಉದ್ದೇಶವನ್ನಾಗಿ ಇಟ್ಟುಕೊಂಡಿರುವುದುಂಟು. ಆದರೆ ಪುಟ್ಟರುದ್ರಪ್ಪನವರು ಸ್ವಂತ ಹಣಕ್ಕಿಂತ ಮಿಗಿಲಾಗಿ ಸಾರ್ವಜನಿಕ ಹಣವನ್ನು ಜೋಪಾನ ಮಾಡುತ್ತಾರೆ. ಅಪವ್ಯಯವಾಗಲು ಅವಕಾಶ ಕೊಡುವುದಿಲ್ಲ. ಕಾರ್ಯಕ್ರಮಗಳಲ್ಲಿ ದುಂದು ವೆಚ್ಚ ಆಡಂಬರ ಅವರಿಗೆ ಸಹ್ಯವಾಗುವುದಿಲ್ಲ. ಒಮ್ಮೆ ಮರಿಯಪ್ಪ ಹಾಸ್ಟೆಲ್‌ಗೆ ಬಹು ದೊಡ್ಡ ಮೊತ್ತದ ಹಣ ದೇಣಿಗೆಯಾಗಿ ಬಂದಿತಂತೆ. ಕೊಟ್ಟವರು ದಿ॥ ಎಚ್.ನರಸಿಂಹಯ್ಯನವರಿಗೆ ವಿವರ ತಿಳಿಸಿದಾಗ ಅವರು ಗಾಬರಿಯಿಂದ ಯಾರ ಕೈಗೆ ಕೊಟ್ಟಿರಿ ? ಎಂದರಂತೆ. ಪುಟ್ಟರುದ್ರಪ್ಪನವರ ಕೈಗೆ ಎಂದಾಗ "ಚಿಂತೆಯಿಲ್ಲ, ಸೂಕ್ತ ವ್ಯಕ್ತಿಯ ಕೈಗೆ ತಲುಪಿಸಿದ್ದೀರಿ" ಎಂದರಂತೆ. ಸಾರ್ವಜನಿಕ ಸಂಘ -ಸಂಸ್ಥೆಗಳ ಹಣ ಜೋಪಾನ ಮಾಡಿ, ಸೂಕ್ತವಾಗಿ ವಿನಿಯೋಗಿಸುವುದರಲ್ಲಿ ಪುಟ್ಟರುದ್ರಪ್ಪ ಪರಿಣಿತರು ಎಂದೇ ಎಲ್ಲರ ಅಭಿಪ್ರಾಯ. ಈ 80ರ ವಯಸ್ಸಿನಲ್ಲಿಯೂ ಅವರು ಹೊಂದಿರುವ ಕಾರ್ಯದಕ್ಷತೆ, ನೆನಪಿನ ಶಕ್ತಿ, ಚಟುವಟಿಕೆ ಯುವಕರನ್ನು ನಾಚಿಸುತ್ತವೆ.

ದೆಹಲಿಯಲ್ಲಿ ಬಸವ ತತ್ವ ಪ್ರಚಾರದ ಕೇಂದ್ರವೊಂದನ್ನು ಹೊಂದಬೇಕು, ಅದೂ ಸ್ವಂತ ಕಟ್ಟಡದಲ್ಲಿ ಎಂಬ ಅಪೇಕ್ಷೆಯನ್ನು ಕೆಲವರ ಮುಂದಿಟ್ಟಾಗ ಅನೇಕರು ಬೇಕಾಗುವ ಹಣವನ್ನು ಎಲ್ಲಿಂದ ತರುವುದೆಂದು ನಿರುತ್ಸಾಹಿತರಾಗಿ ಮಾತನಾಡಿದಾಗ ಪುಟ್ಟರುದ್ರಪ್ಪ ನುಡಿದರು. "ದೆಹಲಿಯಲ್ಲಿ ಆಗುವುದು ಅಗತ್ಯವಿದೆ. ಸಾಲ ಮಾಡಿಯಾದರೂ ಜಾಗ ಖರೀದಿಸಬೇಕು." ಅವರ ಉತ್ಸಾಹದ ನುಡಿಗಳು ಎಲ್ಲರಿಗೂ ಸ್ಫೂರ್ತಿ ನೀಡಿದವು. ಕೆಲಸವು ಪೂರೈಸೇ ಬಿಟ್ಟಿತು.

ಬರೆಯುತ್ತಾ ಹೋದಷ್ಟು ಬರೆಯಬೇಕಾದುದು ಸಾಕಷ್ಟು ಇದೆ ಎಂಬಂತಹ ಬಹುಮುಖಿ ವ್ಯಕ್ತಿತ್ವ ಪುಟ್ಟರುದ್ರಪ್ಪನವರದು. ಪೂಜ್ಯ ಗುರುಗಳು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನೈದಿದಾಗ ನಾನು ಹೇಳಿದೆ, "ನೀವು ಹಿರಿಯರು, ಲೋಕ ಜ್ಞಾನ , ಅನುಭವ ಉಳ್ಳವರು. ನಮ್ಮ ಸಂಸ್ಥೆಯ ಮಾರ್ಗದರ್ಶಕರಾಗಿ ಇರಬೇಕು " ಎಂದು. ಅದರಂತೆ ಹಿರಿಯ ಚೇತನವಾದ ಶರಣ.ಪುಟ್ಟರುದ್ರಪ್ಪ ನಮ್ಮ ಸಂಸ್ಥೆಗಳ ಬೆನ್ನೆಲುಬಾಗಿದ್ದಾರೆ. ಈ ಹಿನ್ನೆಲೆಯಲ್ಲಿ 80 ವರ್ಷಗಳನ್ನು ಪೂರೈಸುತ್ತಿರುವ ಅವರಿಗೆ ನಮ್ಮ ಸಂಸ್ಥೆಯ ವತಿಯಿಂದ ಬೆಂಗಳೂರಿನ ಬಸವ ಮಂಟಪದಲ್ಲಿ ದೇವ (ಭಾನು)ವಾರ, ದಿ. 22-4-07ರಂದು ನಾವು ಶುಭಹಾರೈಕೆ (ಸನ್ಮಾನ) ಸಮಾರಂಭವನ್ನು ಏರ್ಪಡಿಸಿದ್ದೇವೆ.

ಶರಣ.ಪುಟ್ಟರುದ್ರಪ್ಪನವರ ವ್ಯಕ್ತಿತ್ವವನ್ನು ಡಿ.ವಿ.ಜಿಯವರ ಒಂದು ಪದ್ಯದ ಮೂಲಕ ಸಂಕ್ಷಿಪ್ತವಾಗಿ ಹೇಳಲು ಸಾಧ್ಯ.

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ವಿಧಿ ಮಳೆಯು ಸುರಿಯೆ
ಬೆಲ್ಲ -ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳು ಒಂದಾಗು ಮಂಕುತಿಮ್ಮ

ಅವರು ಹೆಚ್ಚಿನ ಕಾಲ ಆಯುರಾರೋಗ್ಯ ಭಾಗ್ಯದೊಡನೆ ಇಳೆಯಲ್ಲಿ ಸೇವೆ ಸಲ್ಲಿಸಲೆಂದು ನಮ್ಮ ಹೃತ್ಪೂರ್ವಕ ಹಾರೈಕೆ.

- ಮಾತಾಜಿ

ಲಿಂಗದೇವ ವಾಣಿ

ಎಲ್ಲಿ ಹುಡುಕುವೆ ನೀನು ಓ ಮಾನವಾ
ನಿನ್ನ ಒಳಗೇ ನಾನು ವಾಸಿಸಿರುವೆ ॥ ಪ ॥

ನಾನು ನಿನ್ನೊಳಗೇ ಇದ್ದರೂ ನನಗಾಗಿ
ಎಲ್ಲೆಲ್ಲೂ ಹುಡುಕಾಡಿ ಬಳಲುತ್ತಿರುವೆ ॥ 1 ॥

ನಾನು ಜಲದೊಳಗೇ ಇಲ್ಲ ಗಿಡಮರದೊಳಗೇ ಇಲ್ಲ
ವಾಯು, ಅಗ್ನಿಯೊಳಗೇ ಹುದುಗಿಕೊಂಡಿಲ್ಲ ॥ 2 ॥

ಗುಡಿಮಸೀದಿಯೊಳಿಲ್ಲ, ಹೋಮ ಹವನದೊಳಿಲ್ಲ,
ಯಜ್ಞಯಾಗಾದಿಗೂ ದೊರೆವ ನಾನಲ್ಲ ॥ 3 ॥

ಸನ್ಯಾಸದೊಳಗಿಲ್ಲ, ವೈರಾಗ್ಯದೊಳಗಿಲ್ಲ
ಅಣಿಮಾದಿ ಸಿದ್ಧಿಗೂ ದೊರೆವ ನಾನಲ್ಲ ॥ 4 ॥

ಬಸವ ತತ್ವದ ರೀತಿ ನಡೆವ ಕಂಡರೆ ಪ್ರೀತಿ
ಬಸವನಾ ಭಕ್ತರಿಗೆ ತೋರುವೆ ನಾನು ॥ 5 ॥

- ಎಂ.ಎಂ. ಹಿರಿಲಿಂಗಣ್ಣನವರು, ವಕೀಲರು, ರಾ.ಬ.ದಳ, ಸವದತ್ತಿ



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಬೆಂಗಳೂರಿನ ರಾಜಾಜಿ ನಗರದ 2ನೆಯ ಬ್ಲಾಕಿನ
20ನೆಯ ಮುಖ್ಯ ರಸ್ತೆಯಲ್ಲಿರುವ ಬಸವ ಮಂಟಪದಲ್ಲಿ

ವಿಶ್ವಗುರು ಬಸವಣ್ಣನವರ
874ನೆಯ ಜಯಂತಿ ಉತ್ಸವ

ಮಾತೃ(ಶುಕ್ರ)ವಾರ, ದಿ.20-4-2007

ವೇಳೆ : ಬೆಳಿಗ್ಗೆ 10-30


ಶರಣ. ಎನ್.ಪುಟ್ಟರುದ್ರ
ಶರಣ. ಡಾ||ಸಿ.ಸೋಮಶೇಖರ್, ಐ.ಎ.ಎಸ್
ಇವರಿಗೆ ಶುಭಾಹಾರೈಕೆ ಸಮಾರಂಭ

ಭಾನು (ದೇವ) ವಾರ, ದಿ.22-4-2007


ವೇಳೆ : ಬೆಳಿಗ್ಗೆ 10-30

* ಸರ್ವರಿಗೂ ಆದರದ ಸುಸ್ವಾಗತ *


ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ
2035, 20ನೆಯ ಮುಖ್ಯ ರಸ್ತೆ, 2ನೇ ಬ್ಲಾಕ್
ರಾಜಾಜಿ ನಗರ, ಬೆಂಗಳೂರು-10
ದೂರವಾಣಿ: 23325335, 23322790




ನಡೆ ಮಡಿ ಹಾಸಿ ಪೂಜ್ಯ ಮಾತಾಜಿಯವರನ್ನು ಸ್ವಾಗತಿಸುತ್ತಿರುವ ಬೆಂಗಳೂರಿನ ರಾ.ಬ.ದಳದ ಶರಣ ವೃಂದ




ಪೂಜ್ಯ ಮಾತಾಜಿಯವರಿಂದ ಧರ್ಮಪಿತರ ಪೂಜೆ




ಯು.ಎಸ್.ಎಯ ಕ್ಯಾಲಿಫೋರ್ನಿಯಾದ ಮಿಲ್ ಪಿಟಾಸ್‌ದಲ್ಲಿರುವ
ಕಿರಣ ಕರಡಿ ಮತ್ತು ಪದ್ಮಾರಾಣಿ ದಂಪತಿಗಳಿಂದ ವಿಶೇಷ ಮಾಲಾರ್ಪಣೆ




ಶರಣ ವೃಂದದಿಂದ ಪುಷ್ಪವೃಷ್ಟಿ-ಆರತಿ



ಗಣಾಚಾರದಳದವರಿಂದ ಪುಷ್ಪವೃಷ್ಟಿ ಚಂದ್ರಮೌಳಿ, ಗುರುನಾಥ, ಸಚ್ಚಿದಾನಂದ




ಬೆಂಗಳೂರಿನ ರಾಜಾಜಿನಗರದ ಶಾಸಕರಾದ ಶರಣ.ನೆ.ಲ.ನರೇಂದ್ರಬಾಬು ಅವರಿಂದ
ಮಾಲಾರ್ಪಣೆ ಮತ್ತು ಆಶೀರ್ವಾದ ಕೋರಿಕೆ



ಶರಣ.ಪುಟ್ಟರುದ್ರ, ಪೂಜ್ಯ ಮಾತಾಜಿಯವರ ತಾಯಿ ಶರಣೆ. ಗಂಗಮ್ಮನವರು



ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಶರಣ ವೃಂದ



ಬೆಂಗಳೂರು ರಾ.ಬ.ದಳದ ಹಾಗೂ ಗಣಾಚಾರ ದಳದ ವತಿಯಿಂದ ಪೂಜ್ಯ ಮಾತಾಜಿಯವರಿಗೆ ಲ್ಯಾಪ್ ಟಾಪ್‌ನ್ನು ಕೊಡುಗೆಯಾಗಿ ನೀಡುತ್ತಿರುವ ಶರಣ ವೃಂದ



ಶರಣವೃಂದ ನೀಡಿದ ಲ್ಯಾಪ್‌ಟಾಪ್‌ನೊಂದಿಗೆ ಪೂಜ್ಯ ಮಾತಾಜಿ




ಇಚಲ ಕರಂಜಿಯಲ್ಲಿ ಮರಾಠಿ ಕಲ್ಯಾಣ ಕಿರಣ ಬಿಡುಗಡೆ ಸಮಾರಂಭ.
ಅಧ್ಯಕ್ಷತೆ: ಮಾಲೂತಾಯಿ ಚಂದ್ರಕಾಂತ ಸ್ವಾಮಿ, ಸನ್ನಿಧಿ: ಬಸವ ಲಿಂಗ ಸ್ವಾಮೀಜಿ



ಸಂಪಾದಕ ಮಂಡಳಿ ಸಿದ್ದಾಮ ಪೂಜಾರಿ, ಪಾಟೀಲ್, ದಾನಿ: ಕೃಷ್ಣಪ್ಪ ಮುಸಳೆ ಮತ್ತಿತರರು



ದ್ವಿತೀಯ ಲಿಂಗಾಯತ ಗಣ ಮೇಳದ ವೇದಿಕೆ. ವೀರಣ್ಣ ಲಿಂಗಾಯತ, ಚಂದ್ರಮ್ಮ ಪಾಟೀಲ್, ಮಾಲೂತಾಯಿ,
ಅಬ್ದುಲ್ ನದಾಫ್ ಪೂಜ್ಯ ಚನ್ನಬಸವಾನಂದ ಸ್ವಾಮೀಜಿ, ಪೂಜ್ಯ ಬಸವ ಲಿಂಗ ಸ್ವಾಮೀಜಿ, ದೇವಿಕಾ ಶರಣಪ್ಪ



ದ್ವಿತೀಯ ಲಿಂಗಾಯತ ಗಣ ಮೇಳದ ಪ್ರತಿನಿಧಿ ಶರಣರು



ದ್ವಿತೀಯ ಲಿಂಗಾಯತ ಗಣ ಮೇಳದಲ್ಲಿ ಭಾಗಿಗಳಾದ ಶರಣೆಯರು



ಬಸವ ಮಹಾಮನೆಯ ಪ್ರಾರ್ಥನಾ ಮಂದಿರ ಮತ್ತು ಅತಿಥಿ ಗೃಹ, ಬಸವಕಲ್ಯಾಣ



ಬಸವ ಕಲ್ಯಾಣದ ಮಹಾಮನೆಯಲ್ಲಿರುವ ಬಸವ ಧ್ಯಾನ ಮಂಟಪ (ಗವಿ)



ಬಸವ ಧರ್ಮ ಪೀಠದ ಶರಣ ಶೈಲದಲ್ಲಿರುವ ಅಕ್ಕಮಹಾದೇವಿ ಗವಿ

CPMG/KA/BGW-50/2006-2008 WPP (W)-17 R.No.19980/70

ಶರಣ ಎನ್.ಪುಟ್ಟರುದ್ರ

